TESS India

# Perspective on leadership: building a shared vision for your school

## ನಾಯಕತ್ವದ ದೃಷ್ಟಿಕೋನ:ನಿಮ್ಮ ಶಾಲೆಯ ಸಹಭಾಗಿತ್ವದ/ಹಂಚಿಕೊಂಡ ದೃಷ್ಟಿಕೋನವನ್ನು





Teacher Education through School-based Support in India
www.TESS-India.edu.in

The Open University
UKaid from the British people

cc BY SA
http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್–ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ–ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)– ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್–ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಲಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್–ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ–ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್–ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್–ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್–ಇಂಡಿಯಾ** ರೂಪುಗೊಂಡಿದೆ.

*Version 2.0 SL11v1*

*Karnataka*

*Except for third party materials andd otherwise stated, this content is made aavvailable under a Creative Commons Attribution-ShareAlike liceennce: http://creativecommons.org/licenses/by--sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದ ಬಗ್ಗೆ:

ಈ ಘಟಕವು ಶಾಲೆಯ ಕಾಣ್ಕೆಯನ್ನು ಬೆಳಸುವುದು ಹಾಗು ಅನುಷ್ಠಾನಗೊಳಿಸುವರ ಬಗ್ಗೆ ತಿಳಿಸುತ್ತದೆ. ಸುನಿಲ್ ಬಾತ್ರಾ (2011) ರವರು ಭಾರತದ "ಶಾಲೆಗಳು ಬಹಳ ಅಪರೂಪವಾಗಿ ತಮ್ಮದೇ ಕಾಣ್ಕೆಯನ್ನು ಹೊಂದಿರುವವೆಂದು ಅಭಿಪ್ರಾಯ ಪಡುತ್ತಾರೆ. ಈ ಅಭಿಪ್ರಾಯಕ್ಕೆ ಕಾರಣ, ಈ ಹಿಂದೆ, ಶಾಲೆಗಳ್ಲು ಜಿಲ್ಲಾ ಶಿಕ್ಷಣದ ಆಡಳಿತಕ್ಕೆ ಒಳಪಟ್ಟಿದ್ದುದೇ ಆಗಿರಬಹುದು.ಶಿಕ್ಷಣ ಹಕ್ಕುಕಾಯ್ದೆ(R T E 2009) ಯು ಶಾಲೆಗಳು ಹೆಚ್ಚೆಚ್ಚು ಸ್ವಾಯತ್ತತೆ ಹೊಂದಿ ತಮ್ಮ ಸುಧಾರಣೆಗಳನ್ನು ತಾವೆ ಜವಾಬ್ದಾರಿಯುತವಾಗಿ ನಿಬಾಯಿಸುತ್ತಾ, ಅದರಲ್ಲಿ ಸಮುದಾಯವನ್ನ ಪಾಲ್ಗೊಳ್ಳುವಂತೆ ಮಾಡುವ ಆಕಾಂಕ್ಷೆಯನ್ನು ಸ್ಪಷ್ಟವಾಗಿ ಹೇಳುತ್ತದೆ. ಎಲ್ಲಾ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಕಮೀಟಿಯ ಕಡ್ಡಾಯ ರಚನೆ, ಹಾಗು ಶಾಲಾಭಿವೃದ್ಧಿ ಯೋಜನೆಯನ್ನು ಕಡ್ಡಾಯಗೊಳಿಸಿರುವುದು ಈ ಉದ್ದೇಶಕ್ಕಾಗಿಯೇ ಪೂರಕವಾಗಿ ಬಳಸಲಾಗಿದೆ.

ಕಾಣ್ಕೆಯ ಶಕ್ತಿಯ ಈ ಒಂದು ಕಥೆಯಲ್ಲಿದೆ: ಕಲ್ಲು ಕುಟಿಕನೊಬ್ಬನು ದೇವಾಲಯದ ಬಾಗಿಲಮೇಲೆ ಕೂಡಿಸಲು ಬೇಕಾದ ಒಂದು ಪ್ರಮುಖ ಕಲ್ಲಿನ ಕೆತ್ತನೆ ಕೆಲಸದಲ್ಲಿ ನಿರತನಾಗಿದ್ದನು. ಅವನನ್ನು ದಾರಿಹೋಕನೊಬ್ಬ, " ನೀವು ಏನು ಮಾಡುತ್ತಿದ್ದೀರಿ ?" ಎಂದು ಪ್ರಶ್ನಿಸಿದಾಗ, ತಕ್ಷಣ " ನಾವು ದೇವರ ಕೀರ್ತಿಯನ್ನು ಹೆಚ್ಚಿಸಲು ಒಂದು ದೇಗುಲವನ್ನು ನಿರ್ಮಿಸುವಲ್ಲಿ ಸಹಾಯ ಮಾಡುತ್ತಿರುವುದಾಗಿ ತಿಳಿಸಿದನು.. ಕಲ್ಲು ಕುಟಿಕನು ಯಾವುದೇ ಕಲ್ಲಿನ ಆಯ್ಕೆ ಬಗ್ಗೆ , ಕೆತ್ತನೆಯಲ್ಲಿನ ತಮ್ಮ ಕೌಶಲ್ಯದ ಬಗ್ಗೆ ಹೇಳಿಕೊಳ್ಳಲಿಲ್ಲ; ಆದರೆ ಒಂದು ಸುಂದರ ದೇವಾಲಯವನ್ನು ಕಟ್ಟುವ, ತನ್ನ ಹಾಗು ಆ ಸಮುದಾಯದ ಕಾಣ್ಕೆಯ ಬಗ್ಗೆ ತಿಳಿಸಿದ. ಈ ಕಾಣ್ಕೆಯು ಹೆಮ್ಮೆಯಿಂದ ತಂಡದ ಒಬ್ಬ ಸದಸ್ಯನಾಗಿ ಕೆಲಸ ಮಾಡಲು ಅವನಿಗೆ ಶಕ್ತಿಯನ್ನು, ಸ್ಫೂರ್ತಿಯನ್ನು ನೀಡಿತು. ತಮ್ಮ ಕೈಗೆಟುಕುವುಕದಕ್ಕಿಂತ ಹೆಚ್ಚಿನದೇನನ್ನೋ ಪಡೆಯುವ, ಸಾಧಿಸುವ ಸಾಮೂಹಿಕ ಕಾಣ್ಕೆ(ದರ್ಶನ), ಆ ಸಮಮುದಾಯಕ್ಕೆ, ತಾನೇನನ್ನು ಸ್ವಾಭಾವಿಕವಾಗಿ ಸಾಧಿಸಬಹುದೋ, ಅದಕ್ಕಿಂತ ಹೆಚ್ಚಿನದನ್ನು ಸಾಧಿಸಲು ಪ್ರೇರೇಪಿಸುತ್ತದೆ. ಅದೇ ಕಾಣ್ಕೆಗಿರುವ ಶಕ್ತಿ.

ಶಾಲಾ ನಾಯಕರಾಗಿ ನಿಮ್ಮಶಾಲೆಗೂ ಇಂತಹ ಸ್ಪಷ್ಟ ಕಾಣ್ಕೆಯನ್ನ ಸೃಷ್ಟಿಸುವುದು ನಿಮ್ಮ ಜವಾಬ್ದಾರಿಯಾಗಿದ ಈ ಕಾಣ್ಕೆಯು, ನಿಮ್ಮ ಶಾಲೆಯ ಹಾಲೀ ಪರಿಸ್ಥಿತಿ ಹಾಗು ಶಾಲೆ ಹಾಗೂ ಸಮುದಾಯಗಳೆರಡರ ಬೇಡಿಕೆ ಹಾಗು ಆಶೋತ್ತರಗಳನ್ನು, ಗಮನದಲ್ಲಿಟ್ಟುಕೊಂಡು ರೂಪಿತವಾಗಬೇಕು. ಅದರ ವಿನ್ಯಾಸವು, ನಿಮ್ಮ ಶಾಲೆಯ ಸಾಂಸ್ಕೃತಿಕ ಗುರುತನ್ನು ಹಾಗು ನಿಮ್ಮ ವಿಧ್ಯಾರ್ಥಿಗಳ ಹಾಗು ಅವರ ಕುಟುಂಬಗಳ ಲಕ್ಷಣಗಳಿಗಣುಗುಣವಾಗಿರಬೇಕು.

ಈ ಘಟಕದಲ್ಲಿ, ಒಂದು ಒಳ್ಳೆಯ ಕಾಣ್ಕೆಯೆಂದರೆ ಹೇಗಿರುತ್ತದೆ? ಅದರ ರಚನೆಯಲ್ಲಿ ಹಾಗು ಯಶಸ್ವುಗೊಳಿಸುವುದಕ್ಕಾಗಿ, ಎಲ್ಲಾ ಬಾಗೀದಾರರನ್ನು ಹೇಗೆ ಒಳಗೊಳಿಸಿಕೊಳ್ಳಬೇಕು? ಹೇಗೆ ಒಂದು ಕಾಣ್ಕೆಯು ಕ್ರಿಯೆಯಾಗಿ ಹೊರಹೊಮ್ಮುವುದು ಮುಂತಾದ ಅಂಶಗಳನ್ನು ನೋಡುವಿರಿ.

## ಕಲಿಕೆಯ ದಿನಚರಿ:

ನೀವು ಈ ಘಟಕವನ್ನು ಅಭ್ಯಸಿಸುವಾಗ , ನಿಮ್ಮ ಕಲಿಕಾ ದಿನಚರಿಯಲ್ಲಿ ಟಿಪ್ಪಣಿ ಮಾಡಿಕೊಳ್ಳಲು ನಿಮ್ಮನ್ನು ಕೋರಲಾಗುತ್ತದೆ. ಕಲಿಕಾ ದಿನಚರಿಯೆಂದರೆ, ನೀವು ನಿಮ್ಮ ಆಲೋಚನೆಗಳನ್ನು, ಕಲಿಕೆಯನ್ನು, ಯೋಜನೆಗಳನ್ನು ನಿತ್ಯವೂ ಬರೆದಿಡಬಹುದಾದ ಒಂದು ಪುಸ್ತಕ. ಬಹುಶ: ನೀವು ಈಗಾಗಲೇ ಈ ತೆರೆನಾದ ದಿನಚರಿ ಬರೆಯುತ್ತಿರಬಹುದು,

ನೀವು ಈ ಘಟಕದ ಮೇಲೆ ಈಗಾಗಲೇ ಒಬ್ಬರೇ ಅಭ್ಯಾಸ ಮಾಡುತ್ತಿರಬಹುದು; ಆದರೆ ಇನ್ನೊಬ್ಬ ಶಾಲಾ ನಾಯಕರ ಜೊತೆ ನಿಮ್ಮ ಕಲಿಕೆಯನ್ನು ಚರ್ಚಿಸಿದಾಗ ನೀವು ಇನ್ನೂ ಚೆನ್ನಾಗಿ ಕಲಿಯಬಹುದು. ಅವರು ನೀವು ಆಗಲೇ ಹೊಂದಿರುವ ನಿಮ್ಮ ಸಹದ್ಯೋಗಿಯಾಗಿರಬಹುದು, ಅಥವಾ ನೀವು ಹೊಂದ ಬಹುದಾದ ಹೊಸ ಸಂಬಂಧದಲ್ಲಿ ಇರಬಹುದು. ಇದನ್ನು ಒಂದು ಸಂಘಟಿತ ರೀತಿಯಲ್ಲಿ ಮಾಡಬಹುದು, ಅಥವಾ ಒಂದು ಅನೌಪಚಾರಿಕ ಆಧಾರದಲ್ಲಿ ಮಾಡಬಹುದು. ನಿಮ್ಮ 'ಕಲಿಕಾ ದಿನಚರಿ'ಯಲ್ಲಿ ನೀವು ಮಾಡಿಕೊಳ್ಳುವ ಟಿಪ್ಪಣಿಗಳು ನಿಮ್ಮ ಇಂತಹ ಸಂದರ್ಭಗಳಲ್ಲಿ ಉಪಯೋಗವಾಗುತ್ತದೆ. ಅಲ್ಲದೆ ನಿಮ್ಮ ದೀರ್ಘಕಾಲಿನ ಕಲಿಕೆಗಳನ್ನು ನಕ್ಷೆ ತಯಾರಿಕೆಯಲ್ಲಿ ಅಭಿವೃದ್ಧಿ ಯಲ್ಲಿ ಸಹಾಯಕವಾಗುವುದು.

# ಶಾಲಾ ನಾಯಕರು ಈ ಘಟಕದಿಂದ ಏನನ್ನು ಕಲಿಯುತ್ತಾರೆ:

- ಶಾಲಾ ಕಾಣ್ಕೆಯು ಶಾಲೆಯ ದೈನಂದಿನ ಚಟುವಟಿಕೆಗಳನ್ನು ಹೇಗೆ ಶಾಲಾ ಸುಧಾರಣೆಯತ್ತ ಒಯ್ಯುತ್ತವೆ, ಎಂದು ತಿಳಿಸುತ್ತದೆ.
- ನಿಮ್ಮ ಶಾಲಾ ಕಾಣ್ಕೆಯನ್ನು ಹೇಗೆ ರಚಿಸಬೇಕು ?
- ವಿಧ್ಯಾರ್ಥಿಗಳ ಮೇಲೆ ಪ್ರಭಾವ ಬೀರುವಂತಹ ಕಾಣ್ಕೆಯ ರೂಪಣೆಗೆ ಹಾಗು ಅದರ ಸಾಕಾರಕ್ಕೆ, ಇತರರನ್ನು ಹೇಗೆ ತೊಡಗಿಸಕೊಳ್ಳಬೇಕು?

# 1 ನಿಮ್ಮ ಶಾಲೆಯ ಸ್ಪಷ್ಟ ಕಾಣ್ಕೆಯ ಮಹತ್ವ :

ಶಾಲಾ ನಾಯಕತ್ವ ಘಟಕಗಳ ಉದ್ದೇಶವು ನಿಮಗೆ ಪರಿಣಾಮಕಾರಿಯಾದ ನಾಯಕನಾಗಲು ಸಹಾಯಕವಾಗಿದೆ. ಪರಿಣಾಮಕಾರಿ ಶಾಲಾ ನಾಯಕರ ನಡವಳಿಕೆಗಳ 4 ಮುಖ್ಯ ಲಕ್ಷಣಗಳೆಂದರೆ: (ರುದರ ಫೋರ್ಡ, 1985)

- ತಮ್ಮ ಶಾಲೆಯು ಹೇಗಿರಬೇಕು ಮತ್ತು ಎಲ್ಲಿಗೆ ಬೆಳೆಯಬೇಕು ಎಂಬ ಬಗ್ಗೆ, ಬಹಳ ಸ್ಪಷ್ಟವಾದ, ಚೆನ್ನಾಗಿ ತಿಳಿದುಕೊಂಡು ರಚಿಸಿದ ಕಾಣ್ಕೆಯನ್ನು ಹೊಂದಿರುತ್ತಾರೆ ಹಾಗು ಅದು ವಿದ್ಯಾರ್ಥಿಗಳು ಹಾಗು ಅವರ ಬೇಡಿಕೆಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ.
- ಈ ಕಾಣ್ಕೆಯನ್ನು ಶಾಲೆಯ ಮುಖ್ಯ ಗುರಿಗಳನ್ನಾಗಿ ಪರಿವರ್ತಿಸಿ, ಆ ಮೂಲಕ ವಿದ್ಯಾರ್ಥಿಗಳ, ಶಿಕ್ಷಕರ, ಆಡಳಿತಗಾರರ ನಿರೀಕ್ಷೆಗಳರೂಪಿಸುವಿಕೆಗೆ ಸಹಾಯ ಮಾಡುವುದು. ಕಾಣ್ಕೆಯನ್ನು ನೀಡಿ, ಹಾಯಾಗಿ ಕುಳಿತುಕೊಳ್ಳದೆ, ಕಾಲ–ಕಾಲಕ್ಕೆ ಪ್ರಗತಿಯ ಮೇಲುಸ್ತುವಾರಿ ಮಾಡುತ್ತಿರಬೇಕು.
- ಅಗತ್ಯವಿದ್ದಲ್ಲಿ ಪೂರಕ ಹಾಗೂ/ಅಥವಾ ಶಿಸ್ತಿನ ಕ್ರಮ ಜರಗಿಸಲು ಮಧ್ಯ ಪ್ರವೇಶಿಸಬೇಕು..

ಒಬ್ಬ ಪರಿಣಾಮಕಾರಿ ಶಾಲಾ ನಾಯಕನಾಗಲು ಈರೀತಿಯ ಕಾಣ್ಕೆಯನ್ನು ಹೊಂದುವುದು/ಬಳೆಸಿಕೊಳ್ಳುವುದು ಬಹಳ ಮಹತ್ವದ್ದಾಗಿದೆ ಶಾಲೆಗಳ ಪರಿಣಾಮಕಾರಿ ಸುಧಾರಣೆ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ,ಜಗತ್ತಿನಾದ್ಯಂತ ಶಿಕ್ಷಣ ವ್ಯವಸ್ಥೆಗಳನ್ನು ಅಧ್ಯಯನ ಮಾಡಿದ ಒಂದು ವರದಿಯ ಪ್ರಕಾರ,ಬಹುತೇಕ ಎಲ್ಲ ಉತ್ತಮ ಶಾಲಾ ನಾಯಕರ ಪ್ರಕಾರ ಒಂದು ಸ್ಪಷ್ಟತವಾದ ಕಾಣ್ಕೆ ಮತ್ತು ನಿರ್ಧಿಷ್ಟ ಗುರಿ ತಮ್ಮ ಸಾಧನೆಯ ಅತಿ ಮುಖ್ಯ ಕಾರಣೀಭೂತ ಅಂಶಗಳೆಂದು ಗುರ್ತಿಸಿದ್ದಾರೆ. (Mckinesy & co.201)

"ಕಾಣ್ಕೆ" ಎಂದರೆ ಒಂದು ಶಾಲೆಯು ಏನನ್ನು ಮಾಡಲು, ಮತ್ತು ಏನನ್ನು ಸಾಧಿಸಲು ಬಯಸುತ್ತದೆ ಎಂಬ ಬಗ್ಗೆ ಸ್ಪಷ್ಟವಾಗಿ ತಿಳಿಸುವ ಒಂದು ಹೇಳಿಕೆ/ವಾಕ್ಯ; ಇದು ಶಾಲೆಗೆ ಸಂಬಂಧಿಸಿದ ಎಲ್ಲಾ ಭಾಗೀದರರು– ಶಿಕ್ಷಕರು, ವಿಧ್ಯಾರ್ಥಿಗಳು, ಅವರ ಕುಟುಂಬ ಹಾಗು ಸಮುದಾಯದ ಸದಸ್ಯರುಗಳು– ಎಲ್ಲರೂ ಕೂಡಿ ಕೆಲಸ ಮಾಡಲು ಸಹಾಯ ಮಾಡುತ್ತದೆ. ಅದು ಯಾವಾಗಲೂ, ಮುನ್ನೋಟ ನೀಡುತ್ತದೆಯಲ್ಲದೆ, ಎಲ್ಲರೂ ಒಟ್ಟುಗೂಡಿ ಕೆಲಸ ಮಾಡಲು, ವಿದ್ಯಾರ್ಥಿಗಳ ಏಳ್ಗೆಗಾಗಿ, ಶ್ರಮಿಸಲು ಪ್ರೇರೇಪಿಸುತ್ತದೆ. ಅದು, ಶಾಲೆಯ ಒಟ್ಟಾರೆ ಗುರಿಗಳನ್ನು, ಎದಿರುವ ಪರಿಸ್ಥಿತಿಯಲ್ಲಿ,ಹಿಡಿದಿಡಲು ಹಾಗು ಶಾಲಾ ಅಭಿವೃದ್ಧಿ ಯೋಜನೆ ತಯಾರಿಕೆಗೆ ತಿಳುವಳಿಕೆ ನೀಡಲು ಸಹಾಯ ಮಾಡುತ್ತದೆ.

ಒಂದು ಶಾಲೆಗೆ ಕಾಣ್ಕೆಯು ಬಹಳ ಮಹತ್ವದ್ದಾಗಿದೆ. ಏಕೆಂದರೆ ಅದು;

- ಸಾಂಸ್ಥಿಕ ಜೀವನದ ಎಲ್ಲ ಅಂಶಗಳ ಮೇಲೆ ಗಮನ ಬೀರುತ್ತದೆ..
- ಸಾಂಸ್ಥಿಕ ನೀತಿಗಳನ್ನು ಕಾರ್ಯಗಳ ಯೋಜನೆಗಳನ್ನು ಮತ್ತು ಬೆಳವಣಿಗೆಯನ್ನು ನಿರ್ದೇಶಿಸುತ್ತದೆ.
- ವ್ಯಕ್ತಿಗಳ ಕೆಲಸದಲ್ಲಿ ಸ್ಪಷ್ಟತೆ ಹಾಗು ಆದ್ಯತೆಗಳನ್ನು ಗುರ್ತಿಸುತ್ತದೆ. ಆ ಸಂಸ್ಥೆಯಲ್ಲಿರುವ ಎಲ್ಲ ವ್ಯಕ್ತಿಗಳು, ಕೂಡಿ, ಒಂದು ಸಾಮಾನ್ಯ ಗುರಿಯೆಡೆಗೆ ಸಾಗಲು ಅಗತ್ಯವಿರುವ ಹೊಂದಾಣಿಕೆಗಳನ್ನು ಸಾಧಿಸಿಕೊಳ್ಳಲು, ಮತ್ತು ಕೆಲಸಗಳನ್ನು ಹಂಚಿಕೊಂಡು, ಸಾಗಲು ಸ್ಪಷ್ಟ ಮಾರ್ಗದರ್ಶನ ನೀಡುತ್ತದೆ.
- ಬಾಹ್ಯ ಜಗತ್ತಿಗೆ, ಆ ಸಂಸ್ಥೆಯ ಗುರಿ, ಲಕ್ಷಣಗಳನ್ನು ತಿಳಿಸುತ್ತದೆ.

ಕಾಣ್ಕೆಯು ಯಾವುದೋ ಅಸ್ಪಷ್ಟ ಕಲ್ಪನೆಗಳಿಂದ ಕೂಡಿದ ಕೆಲವು ಪದಗಳ ಒಂದು ಗುಚ್ಚವಲ್ಲ. ಅದು ಒಂದು ಸಮುದಾಯದ ಮೌಲ್ಯಗಳನ್ನು ಧರಿಸಿರುತ್ತದೆ ಹಾಗು ಶಾಲೆಯ ಸುಧಾರಣೆಗೆ ಬೇಕಾದ ಎಲ್ಲಾ ಕ್ರಿಯೆಗಳಿಗೆ ಅಡಿಪಾಯವಾಗಿರುತ್ತದೆ.



### ಚಿಂತನೆಗೆ ವಿರಾಮ:

- ನಿಮ್ಮ ಶಾಲೆಯು ಒಂದು ಕಾಣ್ಕೆಯನ್ನು ಹೊಂದಿದೆಯೇ? ಇದ್ದರೆ,ಅದು ಹೇಗೆ ರಚಿಸಲ್ಪಟ್ಟಿತು? ಯಾರ್‍ಯಾರು ಸೇರಿಕೊಂಡಿದ್ದರು?
- ನಿಮ್ಮ ಶಾಲೆಯು ಒಂದು ಕಾಣ್ಕೆಯನ್ನು ಹೊಂದಿದ್ದಲ್ಲಿ, ಆ ಹೇಳಿಕೆಯಲ್ಲಿ ಯಾವ್ಯಾವ ಮೌಲ್ಯಗಳು ಅಡಕವಾಗಿವೆ?
- ನೀವು ಇನ್ನೂ ಕಾಣ್ಕೆಯನ್ನು ಹೊಂದಿಲ್ಲದಿದ್ದಲ್ಲಿ,ಯಾವ ಮೌಲ್ಯಗಳು ಬಹಳ ಮುಖ್ಯವೆಂದುನಿಮಗೆ ಅನಿಸುತ್ತದೆ?

# 2 ಕಾಣ್ಕೆ ಎಂದರೇನು?

ಕಾಣ್ಕೆಯು ಮೌಲ್ಯದಿಂದ ಕೂಡಿರಬೇಕು ಅದು ಮಾದರಿ ಶಾಲೆಯ ಉದ್ದೇಶದ ಬಗ್ಗೆ ಮತ್ತು ಮೌಲ್ಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಓ ಅ ಈ 2005 & ಖ ಖ ಇ 2009 ರಲ್ಲಿ ಮೌಲ್ಯಗಳನ್ನು ಸೇರಿಸಿದ್ದು ಅವು ಶಾಲಾ ದೃಷ್ಟಿಕೋನದ ಬೆಳವಣಿಗೆ ಸಹಾಯಕವಾಗಿವೆ. ಓ ಅ ಈ 2005 ವು ಭಾರತದಲ್ಲಿ ಶಿಕ್ಷಣ ಬಗ್ಗೆ ಮಹಾತ್ವಾಕಾಂಕ್ಷೆಯ ಕಾರ್ಯಕ್ರಮವೊಂದನ್ನು ಹಾಕಿಕೊಂಡಿದೆ. ಅದಕ್ಕೆ ಖ ಖ ಇ 2009 ವು ಓ ಅ ಈ 2005 ರ ಕಾರ್ಯಕ್ರಮಗಳಿಗೆ ಪೂರಕವಾಗಿ ಕಾರ್ಯಸೂಚಿಗಳನ್ನು ರೂಪಿಸಿದೆ.

- ಎಲ್ಲ ಮಕ್ಕಳು,– ಸಾಮಾಜಿಕವಾಗಿ ಹಿಂದುಳಿದ, ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳುಗಳನ್ನೂ ಒಳಗೊಂಡಂತೆ– ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದ್ದಾರೆ.
- ವಿದ್ಯಾರ್ಥಿಗಳು ಕಲಿಕೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಂತಿರಬೇಕು.
- ವಿದ್ಯಾರ್ಥಿಗಳು ಜಗತ್ತಿನ ಅನುಭವ ಹಾಗೂ ಜ್ಞಾನವನ್ನು ಶಾಲೆಗೆ ಬರುವಾಗ ಹೊಂದಿದ್ದು ಶಿಕ್ಷಕರು ಅವುಗಳ ಬೆಳವಣಿಗೆ ತಿಳುವಳಿಕೆ ಕೌಶಲ್ಯಗಳನ್ನು ತಿಳಿಸುವುದು ಪ್ರಮುಖ ಪಾತ್ರವಹಿಸುತ್ತಾರೆ.
- ಕಲಿಕೆಗೆ ಅವಕಾಶ ಒದಗಿಸುವುದು ಶಿಕ್ಷಕರ ಪಾತ್ರವಾಗಿದೆ.
- ಪಠ್ಯಕ್ರಮವು ವಿದ್ಯಾರ್ಥಿಘಳ ಜೀವನ ಮತ್ತು ಸಮಾಜ ಎದುರಿಸುತ್ತಿರುವ ಸಮಸ್ಯೆಯ ಮೇಲೆ ಬೆಳಕು ಚೆಲ್ಲುವಂತಿರಬೇಕು ಮತ್ತು 21 ಶತಮಾನಕ್ಕೆ

ಹೊಂದಿಕೊಂಡಿರಬೇಕು.

- ಎಲ್ಲ ವಿದ್ಯಾರ್ಥಿಗಳು ಕಲಿಯಲು ಶಕ್ತರಾಗಿರುವರು.

ಇವು N C F 2005 & R T E 2009 ರ ಮೌಲ್ಯಗಳಿಗೆ ಒಳಪಟ್ಟಿವೆ.

ಈ ಮೌಲ್ಯಗಳು ಕೆಲವೊಂದು ಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಲವಾರು ಸವಾಲುಗಳಿವೆ. ಅವುಗಳೆಂದರೆ,

- ಬೇರೆ ಬೇರೆ ಜಾತಿಗಳಿಂದ ಬಂದಿರುವ ವಿದ್ಯಾರ್ಥಿಗಳನ್ನು, ಬೇರೆ–ಬೇರೆ ಕೂಡಿಸಿ,ಭೋದನೆ ಮಾಡುವರು. ಇದರಿಂದ, ಪಾಠಗಳಲ್ಲಿ ಸಮಾನವಾಗಿ ಭಾಗವಹಿಸಲು ಅವಕಾಶ ವಂಚಿತರಾಗಿದ್ದಾರೆ.
- ಹಲವಾರು ಸಮುದಾಯಗಳಲ್ಲಿ, ಗಂಡು ಮಕ್ಕಳಿಗೆ ಮಾತ್ರ ಶಿಕ್ಷಣವು ಬೇಕು; ಹೆಣ್ಣುಮಕ್ಕಳಿಗೇಕೆ ಶಿಕ್ಷಣ ಎಂಬ ತಾರತಮ್ಯ ಭಾವನೆಗಳಿವೆ. ಇದು ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿಸುತ್ತದೆ.
- ಹಲವಾರು ಶಿಕ್ಷಕರು ಸಹ ಗ್ರಾಮೀಣ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯದ ಬಗ್ಗೆ ಅಪನಂಭಿಕೆ ಹೊಂದಿರುವರು.
- ಶಿಕ್ಷಕರು ಯಾವಾಗಲೂ ವಿಷಯದ ಜ್ಞಾನ ತಿಳಿಸಲು ಮಾತ್ರ ಉತ್ಸುಕರಾಗಿರುವುದು.

ನಿಮ್ಮ ಶಾಲೆಯ ಶಾಲಾ ನಾಯಕರಾಗಿ, 2005 N C F & 2009 R T E ರ ಶೈಕ್ಷಣಿಕ ಮಹದಾಕಾಂಕ್ಷೆಗಳನ್ನು ಶಾಲೆಯಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಿಸುವುದು 21 ನೇ ಶತಮಾನದ ಭಾರತದ ಸವಾಲಾಗಿದೆ.

## ಚಟುವಟಿಕೆ 1: ಮೌಲ್ಯಗಳ ಕುರಿತು ಚಿಂತನೆ :

ಅವಕಾಶವಿದ್ದರೆ ಈ ಕೆಳಗಿನ ಚಟುವಟಿಕೆಯನ್ನು ಬೇರೆ ಶಾಲಾ ನಾಯಕರ ಜೊತೆ ಅಥವಾ ಸಹದ್ಯೋಗಿ ಜೊತೆ ಮಾಡಿ ನೋಡಿ. ಈ ಕೆಳಗಿನ ತಖ್ತೆ–1 ರ ಹೇಳಿಕೆಗಳನ್ನು ಸತ್ಯಾಂಶಕ್ಕೆ ಒಳಪಡಿಸಿ ಯಾವ ಹೇಳಿಕೆಗಳು ಮೌಲ್ಯಗಳು NCF 2005 & R T E 2009 ಕ್ಕೆ ಹೊಂದಿವೆ ಎಂದು ಸೂಚಿಸುವುದು.

ತಖ್ತೆ 1: ಬೇರೆ ಬೇರೆ ಶಾಲೆಗಳ **ಕಾಣ್ಕೆ ಹೇಳಿಕೆಗಳ ವಿಶ್ಲೇಷಣೆ :**

| **ಶಾಲೆ ಮತ್ತು ಹೇಳಿಕೆ** | **ಯಾವ ಮೌಲ್ಯ** | **ಅದು NCF 2005 & RTE 2009 ಕ್ಕೆ ಒಳಪಟ್ಟದೆಯೇ** |
|---|---|---|
| **ಲಾಸುನಿಯಾ ಶಾಲೆ :** ಕುಟುಂಬಗಳು ಮತ್ತು ಶಾಲೆ ಒಟ್ಟುಗೂಡಿ ವಿದ್ಯಾರ್ಥಿಗಳ ಕಲಿಕೆಗೆ ಕೆಲಸ ಮಾಡಬೇಕು | | |
| **ನೀಲಮ್ ಶಾಲೆ :** ಶಾಲೆಯ ಪ್ರತಿಯೊಂದು ಮಗು ತನ್ನ ಸಂಪೂರ್ಣ ಬೆಳವಣಿಗೆ ಹೊಂದಲು ಪ್ರತ್ಸಾಹಿಸುವುದು. | | |
| **ಪೆನ್ನಾ ಶಾಲೆ :** ಶಾಲಾ ವಾರ್ಷಿಕ ಪರೀಕ್ಷೆಗಳಲ್ಲಿ ಶೇಕಡಾ 100 ಕ್ಕೆ 100 ಪ್ರಗತಿ (ಯಶಸ್ಸು) ಸಾಧಿಸುವುದು. | | |
| **ಮೊಂಗಾ ಶಾಲೆ :** ನಮ್ಮ ದೃಷ್ಟಿಕೋನವು ಸಂತೋಷ, ಕಾಳಜಿ ಹಾಗೂ ಸ್ಪೂರ್ತಿ ತುಂಬುವ ವಾತಾವರಣಕ್ಕೆ ಅವಕಾಶ ಕಲ್ಪನೆ ಅದರಿಂದ ಕಲಿಕೆ ಮಗು ಉತ್ತಮ ಸಮಾಜ ನಿರ್ಮಾಣಕ್ಕೆ ಅಣಿಗೊಳಿಸುವುದು. | | |
| **ಮುಕ್ತಾ ಶಾಲೆ :** ಎಲ್ಲ ವಿದ್ಯಾರ್ಥಿಗಳ ಅಗತ್ಯಗಳನ್ನು ಪೂರೈಸುವಂತಿರಬೇಕು. | | |
| **ಮನಿಕ ಶಾಲೆ :** ನಮ್ಮ ಶಾಲೆಗಳು ವಿದ್ಯಾರ್ಥಿಗಳ ಉನ್ನತ ಸಾಧನೆ ಮಾಡಲು ಸಹಕಾರಿಯಾಗಿರಬೇಕು. | | |
| **ಪುಲ್ಲರಾಜ ಶಾಲೆ :** ಎಲ್ಲ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಬೇಕು. | | |
| **ಹೀರಾ ಶಾಲೆ :** ಪ್ರತಿಯೊಂದು ಮಗು ತನ್ನ ಬಾಲ್ಯಾವಸ್ಥೆಯನ್ನು ಅನುಭವಿಸಲು ಅವಕಾಶವ ಕಲ್ಪಿಸುವುದರಲ್ಲಿ ನಂಬಿಕೆ ಇಡಬೇಕು | | |
| ಅವರ ವೈಯಕ್ತಿಕ ಸಂಸ್ಕೃತಿ ಮತ್ತು ಪಿತ್ರಾರ್ಜಿತ ಮೌಲ್ಯಗಳಿಗೆ ಬೆಲೆ ಕೊಡಬೇಕು | | |

***ತಖ್ತೆ 1. ಕಾಣ್ಕೆಗಳ ಹೇಳಿಕೆಗಳ ವಿಶ್ಲೇಷಣೆ.***

ನಿಮ್ಮಶಾಲೆಯ ಸಮುದಾಯದ ಸದಸ್ಯರು, NCF 2005 ಮತ್ತು REA 2009 ಗಳ ಆಶಯಕ್ಕೆ ವ್ಯತಿರಿಕ್ತವಾದ ಮೌಲ್ಯಗಳನ್ನು ಹೊಂದಿದ್ದರೆ, ನೀವು ಅವರ ಅಭಿಪ್ರಾಯಗಳನ್ನು, ಧೋರಣೆಗಳನ್ನು ಅಹೋರಾತ್ರಿಯಲ್ಲಿ ಬದಲಾಯಿಸಲು ಸಾಧ್ಯವಾಗದು. ಆದಾಗ್ಯೂ, ನೀವೇ ನಿಮ್ಮ ಕೆಲವೊಂದು ನಡವಳಿಕೆಗಳನ್ನು ಬದಲಾಯಿಸಿಕೊಂಡು, ನಿಮ್ಮ ಶಿಕ್ಷಕ ವೃಂದದಿಂದಲೂ ಅಂತಹ ಬದಲಾವಣೆಗಳನ್ನು ಬಯಸಿದಲ್ಲಿ, ನೀವು ಕಾಲಕ್ರಮೇಣ, ನಿಮ್ಮ ಶಾಲೆಯಲ್ಲಿ, ಅಂತಹ ವಾತಾವರಣವನ್ನು,ಎಲ್ಲಿ ಆ ಮೌಲ್ಯಗಳು ಅನಾವರಣಗೊಳ್ಳಲು ಸಾಧ್ಯವೋ ಅಂತಹ, ಸೃಷ್ಟಿಸಬಹುದು.

ಚಿತ್ರ 1ರಲ್ಲಿ ಬಂದಿರುವ ಪ್ರತಿಯೊಂದು ಹೇಳಿಕೆಗೂ, ನಿಮ್ಮಿಂದ ಅನುಸರಿಸಲು ಸಾಧ್ಯವಾಗುವ ಕೆಲವೊಂದು ಮೌಲ್ಯಯುತ ನಡವಳಿಕೆಗಳನ್ನು ಗುರ್ತಿಸಿರಿ.

**ಚರ್ಚೆ (ವಿಚಾರ ವಿನಿಯಮ) :**

**ಚರ್ಚೆ:**

ತಖ್ತೆ 1ರಲ್ಲಿ ನಮೂದಿತವಾಗಿರುವ ಕೆಲವು ಹೇಳಿಕೆಗಳು, NCF 2005 ಮತ್ತು REA 2009 ಗಳ ಆಶಯಕ್ಕೆ ಚೆನ್ನಾಗಿ ಹೊಂದಿಕೊಳ್ಳುವುವು. ಇನ್ನು ಕೆಲವು ಹೊಂದುವುದಿಲ್ಲ. ಉದಾಹರಣೆಗೆ– ಎಲ್ಲ ವಿದ್ಯಾರ್ಥಿಗಳು ವಿಶ್ವ ವಿದ್ಯಾಲಯದ ಶಿಕ್ಷಣ ಪಡೆಯಬೇಕು ಎಂಬುದು ವಾಸ್ತವವೆ? ಇದರ ಸಂದೇಶವು, ಮಕ್ಕಳು ವಿಶ್ವವಿಧ್ಯಾಲಯದ ಶಿಕ್ಷಣ ಪಡೆಯುವುದು, ಬೇರೆಲ್ಲ ಮೌಲ್ಯಗಳಿಗಿಂತ ಮುಖ್ಯವೆಂದು ಹೇಳುತ್ತದೆ. ಆದರೆ, ಹಲವಾರು ವಿಧ್ಯಾರ್ಥಿಗಳಿಗೆ ಇದು ಪ್ರಮುಖವಲ್ಲದಿರಬಹುದು. ಆದರೆ ನೀಲಮ್ ಮತ್ತು ಮೊಂಗಾ ಶಾಲೆಯ ಹೇಳಿಕೆಗಳು ಹೆಚ್ಚು ಸೂಕ್ತವಾಗಿ ಹೊಂದುತ್ತವೆ..




**ಚಿತ್ರ 2 ಒಳ್ಳೆಯ ದೃಷ್ಟಿಕೋನದ ಹೇಳಿಕೆಗಳು**

# 3 ನಿಮ್ಮ ಶಾಲೆಗಾಗಿ ಒಂದು ಕಾಣ್ಕೆಯನ್ನು ನಿರ್ಮಿಸುವುದು:

ಒಂದು ಶಾಲಾ ಕಾಣ್ಕೆಯು ಆ ಶಾಲೆಯ ವಿಶಿಷ್ಠ ಪರಿಸ್ಥಿತಿ ಹಾಗು ಆ ಸಮುದಾಯದ ಮೌಲ್ಯಗಳನ್ನು ಬಿಂಬಿಸುತ್ತಿರುತ್ತದೆ. ಆದರೆ ಅದು ಏಕಾಂಗಿ (ಪ್ರತ್ಯೇಕಿಸು) ವಂತಿರಬಾರದು. ಅದು ಚಿತ್ರ 3 ರಲ್ಲಿ ತೋರಿಸಿರುವಂತೆ ವಿಸ್ತೃತ ದೃಷ್ಠಿಕೋನ, ಹಾಗು ಬಾಹ್ಯ ಜಗತ್ತಿನ ಜೊತೆ ಸಾಮ್ಯತೆ ಹೊಂದಿರಬೇಕು.




**Figure 3** The wider contexts that must influence your vision.

N C F 2005 & R T E 2009 ಯಲ್ಲಿಹೇಳಿರುವ ತತ್ವಗಳು ಹಾಗು ಮೌಲ್ಯಗಳು,ರಾಷ್ಟ್ರೀಯ ಮತ್ತು ರಾಜ್ಯ ಪಠ್ಯಕ್ರಮ ರಚನೆಗೆ ಆಧಾರವಾಗಿರಬೇಕು. ನಿಮ್ಮ ಕಾರ್ಯವು ಈ ದೃಷ್ಠಿಕೋನಗಳನ್ನು ನಿಮ್ಮ ಶಾಲೆಯಲ್ಲಿ ಅಳವಡಿಸುವಂತಿರಬೇಕು.

## ವ್ಯಕ್ತಿ ಅಧ್ಯಯನ 1 ಶಾಲಾ ದೃಷ್ಠಿಕೋನದ ಬಗ್ಗೆ ಶ್ರೀಮತಿ: ಚಡ್ಡಾರವರ ಅಭಿಪ್ರಾಯ (ನಿರ್ಣಯ)

ಶ್ರೀಮತಿ ಚಡ್ಡಾರವರು  ಹುಡುಗಿಯರ ಒಂದು ದೊಡ್ಡ ಶಾಲೆಯ ಫ್ರಾಚಾರ್ಯರಾಗಿದ್ದರು. ಅವರು ಒಂದು ಕೋರ್ಸ್‌ಗೆ ಹೋಗಿದ್ದಾಗ, ಶಾಲೆಗೆ ಒಂದು ಕಾಣ್ಕೆ ಇರಬೇಕಾದುದರ ಮಹತ್ವ ಕಂಡುಕೊಂಡರು. ಕೋರ್ಸ್ನಲ್ಲಿ ಅವರಿಗೆ ಬೇರೆ ಬೇರೆ ಕಾಣ್ಕೆಗಳ ಬಗ್ಗ ಅರಿವು ಮೂಡಿಸಲಾಯಿತು. ಅಲ್ಲಿ ಅವರು ಬೇರೆ ಬೇರೆ ಶಾಲಾ ನಾಯಕರೊಂದಿಗೂ ಕೂಡ ಮಾತನಾಡಿ, ಅವರ ಕಾಣ್ಕೆಗಳ ಬಗ್ಗೆಯೂ ತಿಳಿದುಕೊಂಡರು ಹಾಗು ಅವುಗಳಿಂದ ಪ್ರಭಾವಿತರಾದರು. ಅವರು ಗುಂಪು ಚರ್ಚೆಗಳಲ್ಲಿ ಭಾಗವಹಿಸಿ, ತನ್ನ ಶಾಲೆಯ ಕಾಣ್ಕೆಯ ಬಗ್ಗೆ ಸ್ಪಷ್ಟತೆ ಮೂಡಿಸಿಕೊಂಡರು.

ಬಹಳ ಉತ್ಸುಕತೆದಿಂದಲೇ ಅವರು ಶಾಲೆಗೆ ಹಿಂದುರಿಗಿದರು. ಈ ಆಲೋಚನೆಯನ್ನು ತಮ್ಮ ಸಹದ್ಯೋಗಿಗಳ ಜೊತೆ, ಪಾಲಕರು ಮತ್ತು ಸಮಯದಾಯದ ಜೊತೆಗಾರರಿಗೆ ತಿಳಿಸಿದರು. ತಮ್ಮ ಶಾಲೆಯು ಉತ್ತಮ ಸಾಮರ್ಥ್ಯ ಹೊಂದಿದ ವಿಧ್ಯಾರ್ಥಿಗಳೊಂದಿಗೆ ಉತ್ತಮವಾಗಿ ಕೆಲಸ ಮಾಡುತ್ತಿದ್ದರೂ, ಅಲ್ಪ ಸಾಮರ್ಥ್ಯಉಳ್ಳ ಮಕ್ಕಳನ್ನು ಗಮನಿಸಿ ಅವರಿಗೂ ಉತ್ತಮ ಮಟ್ಟದ ಶಿಕ್ಷಣ ನೀಡುತ್ತಿಲ್ಲವೆಂಬುದನ್ನು ಗಮನಿಸಿದರು ಹಾಗು ಆ ವಿಧ್ಯಾರ್ಥಿಗಳು ಶಾಲೆಯಲ್ಲಿ ಸಂತೋಷವಾಗಿ ಬಾಗವಹಿಸುತ್ತಿಲ್ಲವೆಂಬ ಅಂಶವನ್ನು ಕಂಡುಕೊಂಡರು. ಆದ್ದರಿಂದ ತಮ್ಮ ಶಾಲೆಯ ಕಾಣ್ಕೆಯು, 'ಶಾಲೆಯಲ್ಲಿರುವ ಎಲ್ಲ ಮಕ್ಕಳೂ ಯಶಸ್ಸನ್ನು ಸಾಧಿಸಬೇಕು' ಎಂದು ಆಲೋಚಿಸಿದರು. ಆದರೆ ಎಲ್ಲ ವಿದ್ಯಾರ್ಥಿಗಳಲ್ಲಿ ಇದು ಸಾಧಿಸಲಾಗಲಿಲ್ಲ ಮತ್ತು ಕಡಿಮೆ ಸಾಕ್ಷರತೆ ಹೊಂದಿದವರು ಕೂಡ ಯಾವುದೇ ಸಾಧನೆ ಮಾಡಲು ಸಾಧ್ಯವಾಲಿಲ್ಲ ಆಗ ಅವರು ದೃಷ್ಠಿಕೋನವು ಒಂದು ಶಾಲೆಯ ಪ್ರತಿಯೊಂದು ಮಗು ಯಶಸ್ಸು ಗಳಿಸಬೇಕು ಎಂಬುದಾಗಿರಬೇಕು ಎಂದು ಯೋಚಿಸಿದರು.

ಅವರು ಹಲವು ಸಭೆಗಳನ್ನು ಕರೆದು, ಎಲ್ಲರೊಂದಿಗೆ ತಮ್ಮ ಕಾಣ್ಕೆಯ ಬಗ್ಗೆ ಹಂಚಿಕೊಂಡರು. ಇದರ ಬಗ್ಗೆ ಶಾಲೆಯಲ್ಲಿ ಹೆಚ್ಚು ಚರ್ಚೆಗಳೇನೂ ನಡೆಯಲಿಲ್ಲ, ಮತ್ತೇನೂ ಬದಲಾಗಲಿಲ್ಲ. ಕೆಲವು ಪಾಲಕರು ಮತ್ತು ಸಹದ್ಯೋಗಿಗಳು ಖಾಸಗಿಯಾಗಿ, ಇಂತಹ ಕ್ರಮಗಳಿಂದ, ಶಾಲೆಯ ಫಲಿತಾಂಶದ ಮೇಲೆ ಪ್ರತಿಕೂಲ ಪರಿಣಾಮಗಳಾಗುವ ಭಯವನ್ನು ವ್ಯಕ್ತಪಡಿಸಿದರು. ಇದರಿಂದಕಡಿಮೆ ಸಾಮರ್ಥ್ಯದ ಮಕ್ಕಳ ಮೇಲೆ ಶಿಕ್ಷಕರ ಸಮಯ ಹಾಳು ಮಾಡುವುದು ಸರಿಯಲ್ಲ. ಏಕೆಂದರೆ ಆ ವಿದ್ಯಾರ್ಥಿಗಳು ಏನ

ಮಾಡಿದರೂ ಯಶಸ್ಸು ಗಳಿಸಲು ಸಾಧ್ಯವಿಲ್ಲ, ಎಂಬ ಅಭಿಪ್ರಾಯವೂ ಅವರಲ್ಲಿ ಇದ್ದಿತು. ಹಲವು ಕಾಲದ ನಂತರ ಶ್ರೀಮತಿ ಚಢಾರವರು, ತಮ್ಮ ಶಾಲೆಯ ಕಾಣ್ಕೆಯನ್ನು, ಶಿಕ್ಷಕರಾಗಲಿ, ಪಾಲಕರಾಗಲಿ, ಅಥವಾ ವಿದ್ಯಾರ್ಥಿಗಳಾಗಲಿ, ಸ್ವೀಕರಿಸದೇ ಇರುವುದನ್ನು ಹಾಗು ಕೆಲವು ಒತ್ತಡ ಸ್ಥಿತಿಯನ್ನು ನಿರ್ಮಿಸಿರುವುದನ್ನು ಮನಗಂಡರು

## ಚಟುವಟಿಕೆ 2 : ಶ್ರೀಮತಿ: ಚಢಾರವರು ಇದನ್ನು ಸಾಧಿಸಲು ಬೇರೆ ಏನು ಮಾಡಬಹುದಿತ್ತು?

ನಿಮ್ಮ ಕಲಿಕಾ ದಿನಚರಿಯಲ್ಲಿ, ಈ ಕೆಳಗಿನ ಪ್ರಶ್ನೆಗಳಿಗೆ ನಿಮ್ಮ ಉತ್ತರವನ್ನು ಟಿಪ್ಪಣಿ ಮಾಡಿಕೊಳ್ಳಿರಿ.

- ಶ್ರೀಮತಿ ಚಡ್ಡಾರವರ ಕಾಣ್ಕೆ ಹೇಳಿಕೆಯ ಬಗ್ಗೆ ಏನನ್ನಿಸುತ್ತದೆ?
- ಅವರ ಯಾವ ಕ್ರಮಗಳು ಸರಿಯಿದ್ದವು?
- ಯಾವ ಬದಲಾವಣೆಗಳೂ ಏಕೆ ಸಾದ್ಯವಾಗಲಿಲ್ಲ?
- ಇದನ್ನು ಸಾಧಿಸಲು ಬೇರೆ ಏನು ಮಾಡಬಹುದಿತ್ತು?.

**ಚರ್ಚೆ :**

ಶ್ರೀಮತಿ: ಚಢಾರವರ ಕಾಣ್ಕೆ N C F 2005 ಪ್ರಕಾರ ಸರಿಯಿದೆ.ಅವರು ಹಲವು ಸಭೆಗಳನ್ನು ಬೇರೆ ಜನರೊಂದಿಗೆ ಚರ್ಚಿಸಿದ್ದು ಸೂಕ್ತವಾಗಿತ್ತು. ಆದರೆ ಸಭೆಗಳಲ್ಲಿ ವಿಸ್ತೃತ ಚರ್ಚೆಯಾಗಲಿಲ್ಲ. ಮತ್ತು ಪಾಲಕರು ಮತ್ತು ಶಿಕ್ಷಕರು ಇದರ ಜವಾಬ್ದಾರಿ ತೆಗೆದುಕೊಳ್ಳುವ ದೃಷ್ಟಿಕೋನದ ಬಗ್ಗೆ ವಿಚಾರವಿನಿಯಮ ಮಾಡಲಿಲ್ಲ.

## ವ್ಯಕ್ತಿ ಅಧ್ಯಯನ 2 : ಶ್ರೀ: ಸಿಂಗ್‌ರವರು ತಮ್ಮ ಶಾಲೆಯಲ್ಲಿ ಒಂದು ದೃಷ್ಟಿಕೋನ ನಿರ್ಮಿಸಿದರು :

ಶ್ರೀ; ಸಿಂಗ್‌ರವರು ನಾಯಕತ್ವ ಬೆಳವಣಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಒಂದಿಡೀ ದಿನ ಕಾಣ್ಕೆಯ ನಿರ್ಮಾಣದಲ್ಲಿ, ಶಾಲಾನಾಯಕರ ಪಾತ್ರವನ್ನು ಅರಿಯುವುದಕ್ಕಾಗಿ ಕಳೆದರು. ಅವರು ಬೇರೆ ಶಾಲಾ ನಾಯಕರೊಂದಿಗೆ ಅವರ ಶಾಲೆಯ ಕಾಣ್ಕೆಗಳ ಬಗ್ಗೆ ಚರ್ಚಿಸಿದರು. ತಮ್ಮ ಶಾಲೆಗೆ ಹಿಂತಿರುಗಿ ಹೋದಾಗಲೇ, ಅವರಿಗೆ, ತರಬೇತಿಯಲ್ಲಿ ಗ್ರಹಿಸಿದ ಅಂಶಗಳ ಪ್ರಾಮುಖ್ಯತೆ ಕಣ್ಣಿಗೆ ಕಂಡಿದ್ದು.

ಸಾಮಾನ್ಯವಾಗಿ, ಸಿಂಗ್ ಅವರು, ಶಾಲೆಯ ತಮ್ಮ ಕಚೇರಿಗೆ ಸೀದಾ ಹೋಗುತ್ತಿದ್ದರು ಹಾಗು ಆಡಳಿತ ಕಾರ್ಯದಲ್ಲಿ ಮುಳುಗಿಹೋಗುತ್ತಿದ್ದರು. ಆ ದಿನ ಮಾತ್ರ ಕಚೇರಿಯಲ್ಲಿ, ತಮ್ಮ ಕೈ ಚೀಲ ಇಟ್ಟು, ಕೆಲವು ಬಹಳ ಪ್ರಮುಖವಾದ ಸಂದೇಶಗಳನ್ನಷ್ಟೇ ನೋಡಿ, ಶಾಲೆಯ ಆವರಣದಲ್ಲಿ ತಿರುಗಾಡಿ, ಪ್ರತಿಯೊಂದು ವಿಷಯವನ್ನು ಗಮನಿಸಲು ತೊಡಗಿಕೊಂಡರು. ಅವರಿಗೆ ತರಗತಿಗಳ ಬೇಟ್ಟಿ ರೂಢಿಯಿತ್ತು. ಆದರೆ, ಅದು ಕೇವಲ ಶಿಸ್ತಿನ ವಿಷಯ ಆ ಶಿಕ್ಷಕರೊಂದಿಗೆ ಚರ್ಚಿಸಲು ಸೀಮಿತವಾಗಿರುತ್ತಿತ್ತು. ಆದರೆ, ಆ ದಿನ, ಅವರ ಹೆಜ್ಜೆಗಳಲ್ಲಿ, ನಿರ್ಧಿಷ್ಟ ವಿಷಯ ತಿಳಿದುಕೊಳ್ಳುವ ಆತುರ, ಕಾತುರ ಇತ್ತು. 'ಕಳೆದ 11 ತಿಂಗಳಿಂದ ನಾನು, ಎಂತಹ ಶಾಲೆಯನ್ನು ಮುನ್ನಡೆಸುತ್ತಿದ್ದೇನೆ? ವಿದ್ಯಾರ್ಥಿಗಳ ಕಲಿಕೆ ವೃದ್ಧಿಮಾಡುವಲ್ಲಿ, ನಾವೆಷ್ಟು ಪರಿಣಾಮಿಗಳಾಗಿದ್ದೇವೆ?' ಮುಂತಾದ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಿತ್ತು. ಆದಿನದ ಬಹು ಕಾಲ ಹಾಗು ಅದರ ಮುಂದಿನ ವಾರದಲ್ಲಿ, ಅವರು ಕಚೇರಿಗೆ ಹೋಗಿದ್ದು, ಬಹಳ ವಿರಳವಾಗಿ: ವಿರಾಮದ ವೇಳೆಯಲ್ಲಿ, ಅವರು ವಿದ್ಯಾರ್ಥಿಗಳೊಂದಿಗೆ ಕುಳಿತು, ಅವರೊಡನೆ ಮಾತನಾಡಿದರು. ಶಾಲೆಯ ವೇಳೆಯ ನಂತರದಲ್ಲಿ, ಶಾಲೆಯ ದ್ವಾರದ ಬಳಿ ನಿಂತು, ಪೋಷಕರೊಂದಿಗೆ ಮಾತನಾಡಿದರು.

ಇದಾದ ನಂತರ, ಅವರು ಸಿಬ್ಬಂದಿಯೊಂದಿಗೆ ಒಂದು ಸಭೆ ಮಾಡಿದರು. ಅಲ್ಲಿ ತಮ್ಮ ಶಾಲೆಯ ಕಾಣ್ಕೆಯ ಅಗತ್ಯತೆಯ ಬಗ್ಗೆ ನೇರವಾಗಿ ಪ್ರಸ್ಥಾಪಿಸದೆ, ಶಾಲೆಯನ್ನು ಸುಧಾರಿಸುವ ಅಗತ್ಯತೆಯ ಬಗ್ಗೆ ತನಗೆ ಅರಿವಾಗಿರುವುದಾಗಿಯೂ, ಶಾಲೆಯು ಸುಧಾರಿಸಬೇಕಾದಲ್ಲಿ, ಮೊದಲ ಹೆಜ್ಜೆಯಾಗಿ, ಎಲ್ಲರೂ ಆ ಬಗ್ಗೆ ಏನು ಮಾಡಬೇಕಾಗಿದೆ? ಶಾಲೆಯ, ಭೋದನೆ ಹಾಗು ಕಲಿಕೆ ವಿಷಯದಲ್ಲಿ, ಶಕ್ತಿ/ಸಾಮರ್ಥ್ಯಗಳ ಬಗ್ಗೆ, ದೌರ್ಬಲ್ಯಗಳ ಬಗ್ಗೆ ಅರಿತುಕೊಳ್ಳಬೇಕು, ಎಂಬುದರಬಗ್ಗೆ ಚರ್ಚಿಸಿದರು.

ಅವರ ಇಂತಹ ಕಾರ್ಯಗಳ ಪರಿಣಾಮ ಶೀರ್ಘವಾಯೇ ಕಾಣಲಾರಂಬಿಸಿತು. ಎಲ್ಲಿ ಹೋದರೂ, ಅವರು ಕೇಳುತ್ತಿದ್ದುದು ಒಂದೇ ಪ್ರಶ್ನೆ–'ನಾವು ಹೆಮ್ಮೆ ಪಟ್ಟುಕೊಳ್ಳಬಹುದಾದ ಅಂಶ ಯಾವುವು ಮತ್ತು ನಾವು ಏನನ್ನು ಇನ್ನೂ ಚೆನ್ನಾಗಿ ಮಾಡಬಲ್ಲೆವು?' ಈ ಪ್ರಶ್ನೆಗಳು ಇದುವರೆಗೂ ಮುಚ್ಚಿದ್ದ ವಿಷಯಗಳ/ಅಂಶಗಳ ಬಿಡುಗಡೆಗೆ ಕೀಲಿಕೈಗಳಾದವು.

ಶಾಲಾ ನಿರ್ವಾಹಣ ಸಮಿತಿಯ ಅಧ್ಯಕ್ಷರು ಅವರ ತರಬೇತಿಯ ಬಗ್ಗೆ ಕೇಳಲು ಬಂದರು. ಒಂದು ತಾಸಿನ ಮಾತು–ಕತೆಯ ನಂತರ, ತನ್ನ ಗ್ರಾಮದ ಸಮುದಾಯದೊಂದಿಗೆ, ಶಾಲಾ ಸುಧಾರಣೆಯ ಬಗ್ಗೆ ಅವರ ಅಭಿಪ್ರಾಯ ಪಡಿಯಲು, ಸಭೆ ಮಾಡಲು ಆಹ್ವಾನಿಸಿದರು. ಆ ವಾರ್ಯಾಂತದ ವೇಳೆಗೆ, ಸಿಂಗ್ ರವರು, '11 ತಿಂಗಳು ಆ ಶಾಲೆಯಲ್ಲಿ ಮುಖ್ಯಸ್ಥನಾಗಿದ್ದು ಕಲಿತಿದ್ದುದಕಿಂತ, ಒಂದುವಾರದಲ್ಲಿ, ಎಲ್ಲರೊಂದಿಗೆ ಕಲೆತು, ಚರ್ಚಿಸಿ, ಸಂವಾದಿಸಿ, ಹೆಚ್ಚು ಕಲಿತೆ' ಎಂದು ಕಂಡುಕೊಂಡರು.

# 4 ನಿಮ್ಮ ಶಾಲಾ ಕಾಣ್ಕೆಯ ನಿರ್ಮಾಣದಲ್ಲಿ ಶಾಲಾ ಬಾಗೀದಾರರ ಸಹಭಾಗಿತ್ವ :

ಬಹಳಷ್ಟು ನಿದರ್ಶನಗಳಲ್ಲಿ, ಶಾಲೆಯ ಕಾಣ್ಕೆಯ ರಚನೆಯಲ್ಲಿ, ಶಾಲಾ ನಾಯಕರೇ ಮುಂಚೂಣಿಯಲ್ಲಿರುತ್ತಾರೆ. ಆದರೆ, ಇದು ಯಾವಾಗಲೂ ಆಗಬೇಕಿಲ್ಲ. ಹೊಸ ಶಾಲಾ ನಾಯಕರು ಬಂದಾಗ, ಅವರು, ಸಮುದಾಯವೇ ಆ ಶಾಲೆಯ ಬಗ್ಗೆ ಸ್ಪಷ್ಟವಾದ ಕಾಣ್ಕೆಯನ್ನು ಹೊಂದಿರುವುದನ್ನು ಕಂಡುಕೊಳ್ಳಬಹುದು. ಏಕೆಂದರೆ, ಆ ಶಾಲೆಯೊಂದಿಗಿನ ಆ ಸಮುದಾಯದ ದೀರ್ಘಕಾಲೀನ ಒಡನಾಟ, ಅವರಿಗೆ ಆ ಶಾಲೆಯ ಉದ್ದೇಶದ ಬಗ್ಗೆ, ಅರಿವನ್ನು ಮೂಡಿಸಿರುತ್ತದೆ. ಕಾಣ್ಕೆಯು, ಶಾಲೆಗೆ ಸಂಬಂಧಿಸಿದ ಎಲ್ಲಾ ಬಾಗೀದಾರರನ್ನು ಒಗ್ಗೂಡಿಸಿ, ಎಲ್ಲರೂ ಶಾಲೆಯ ಸುಧಾರಣೆಯಲ್ಲಿ ಬಾಗವಹಿಸುವಂತೆ ಮಾಡುವ ಶಕ್ತಿಯನ್ನು ಹೊಂದಿರುವುದು ಬಹಳ ಮುಖ್ಯವಾಗುತ್ತದೆ. ಯಾವ ಶಾಲೆಯಲ್ಲಿ, ಅಲ್ಲಿನ ಸಮುದಾಯದ ಸದಸ್ಯರುಗಳ ಮತ್ತು ಆ ಶಾಲೆಯ ಮುಖಂಡರ ನಡುವೆ ವೈಮನಸ್ಸು ಹಾಗು ವೈರುದ್ಯತೆಗಳಿತ್ತದೆಯೋ, ಅದೊಂದು ಅಸಂತುಷ್ಟ ಶಾಲೆಯಾಗಿದ್ದು, ಅಲ್ಲಿನ ಬಹುತೇಕ ಶಕ್ತಿ ಅಪವ್ಯಯವಾಗುತ್ತದೆ ಹಾಗು ಶಾಲೆಯ ನಿರ್ಧಿಷ್ಟ ಗುರಿಯಾದ ವಿದ್ಯಾರ್ಥಿಗಳ ಕಲಿಕೆಯ ಸುಧಾರಣೆಯು ಅಸಾಧ್ಯವಾಗಿರುತ್ತದೆ.

ಎಲ್ಲ ಸ್ಥಳೀಯ ಸಮುದಾಯಗಳೂ ವಿಭಿನ್ನವಾಗಿರುತ್ತವೆ. ಶಾಲೆ ಮತ್ತು ಸಮುದಾಯದ ಅತ್ಯವಶ್ಯಕ ಬಾಗೀದಾರರು ಈ ಕೆಳಗಿನವರನ್ನು ಖಂಡಿತವಾಗಿ ಒಳಗೊಂಡಿರಬೇಕು.

- ಶಿಕ್ಷಕರು
- ವಿದ್ಯಾರ್ಥಿಗಳು
- ಪೋಷಕರು ಮತ್ತು ಕುಟುಂಬದ ಸದಸ್ಯರು
- ಸಮುದಾಯದ ಮುಖಂಡರು ಹಾಗು ವ್ಯಾಪಾರಸ್ಥರು

ಬಾಗೀದಾರರು, ಶಾಲೆಯ ಅಭಿವೃದ್ಧಿಯಲ್ಲಿ ಭಾಗವಹಿಸಬೇಕೆಂದರೆ, ಅವರುಗಳನ್ನು ಶಾಲೆಯ ಕಾಣ್ಕೆಯ ರಚನೆ ಹಾಗು ಅದರ ಬೆಳವಣಿಗೆಯಲ್ಲಿ ತೊಡಗಿಸುಕೊಳ್ಳುವುದು ಅವಶ್ಯವಾಗುತ್ತದೆ. ಇವರಲ್ಲಿ ಹಲವರು ವಿವಿಧ ಹಂತಗಳಲ್ಲಿ ವಿದ್ಯಾರ್ಹತೆಯನ್ನು ಹೊಂದಿದ್ದು, ಅವರಿಗೆ ಆದುನಿಕ ಶಾಲೆಯ ಅವಶ್ಯಕತೆಗಳ ಬಗ್ಗೆ ತಿಳುವಳಿಕೆ ಹೊಂದಿದವರಾಗಿರುತ್ತಾರೆ. ಶಾಲಾ ನಾಯಕನಾಗಿ ಅವರುಗಳಿಗೆ ತಿಳಿಸಿ ಅವರುಗಳ ನೆರವನ್ನು ಪಡೆದುಕೊಳ್ಳುವುದು ಅವನ ಜವಾಬ್ದಾರಿಯಾಗಿರುತ್ತದೆ. ಕೆಲವೊಮ್ಮೆ, ಇದು ಒಂದು ಸವಾಲಾಗಿ ಕಾಣಬಹುದು; ಅದು, ಶಾಲೆಯ ಕಾಣ್ಕೆಯಲ್ಲಿರುವ ಮೌಲ್ಯಗಳು, ಆ ಸಮುದಾಯದಲ್ಲಿ ಆಚರಣೆಯಲ್ಲಿರುವ ಮೌಲ್ಯಗಳಿಗಿಂತ ಭಿನ್ನವಾಗಿದ್ದು, ವಿರುದ್ಧ ಅಂಶಗಳಿಂದ ಕೂಡಿದ್ದರೆ, ಖಂಡಿತವಾಗಿ ಒಂದು ಸಂಘರ್ಷವನ್ನೆ ಸೃಷ್ಠಿಸಬಹುದು.

## ವ್ಯಕ್ತಿ ಅಧ್ಯಯನ 3 ಶ್ರೀ: ಸಿಂಗ್‌ರವರು ತಮ್ಮ ಕೆಲಸವನ್ನು ನಿರಂತರವಾಗಿ ಮುಂದುರೆಸಿರುವುದು :

ಶ್ರೀ: ಸಿಂಗ್‌ರವರು S M C ಮತ್ತು ಸ್ಥಳೀಯ ನಾಯಕರು ಶಿಕ್ಷಕರೊಂದಿಗೆ ಸಂಭಾಷಣೆಯಲ್ಲಿ ನಿರಂತರವಾಗಿ ನಿರತಾದವರು. ಅವರೊಂದಿಗೆ ಹಲವು ವಿಷಯವನ್ನು ಚರ್ಚಿಸಿ ತಿಳಿಸಿ ಪ್ರತಿಯೊಬ್ಬರು ಸುಧಾರಣೆಯಲ್ಲಿ ಭಾಗವಹಿಸಲು ತಿಳಿಸಿದರು. ಅವರು ಪ್ರತಿಯೊಬ್ಬರನ್ನು ಸಂಪರ್ಕಿಸಿದ್ದು ದೃಷ್ಠಿಕೋನದ ಮೊದಲ ಹೆಜ್ಜೆಯಾಯಿತು.

ಶ್ರೀ: ಸಿಂಗ್‌ರವರು ನಿರಂತರವಾಗಿ ಸಹದ್ಯೋಗಿಗಳ ಜೊತೆ, ಪಾಲಕರ ಜೊತೆ,ಸಮುದಾಯದ ಮುಖಂಡರ ಜೊತೆ ಸಂಪರ್ಕದಲ್ಲಿದ್ದು, ಚರ್ಚಿಸುತ್ತಿದ್ದರು. ತಮಗೆ ಹೆಮ್ಮೆಯೆನಿಸುವ ಅಂಶಗಳ ಬಗ್ಗೆ ಎಲ್ಲರೊಂದಿಗೆ ಹಂಚಿಕೊಳ್ಳುತ್ತಾ,ಬೇರೆಯವರಿಗೂ ಹಂಚಿಕೊಳ್ಳಲು ಸ್ಪೂರ್ತಿ ನೀಡುತ್ತಿದ್ದರು. ಇದರಿಂದ ಇತರರಿಗೆ, ತಾವು ಯಾವ ವಿಷಯಗಳಲ್ಲಿ ಸುದಾರಣೆಯಾಗಬೇಕೆಂಬ ಬಗ್ಗೆ ಯೋಚಿಸಲಾರಂಭಿಸಿದರು. ಇದರಿಂದ ಅವರು ಶಾಲೆಯ ಸುಧಾರಣೆ ಬಗ್ಗೆ ಹಲವಾರು ಗಮನಾರ್ಹ ಅಂಶಗಳನ್ನು ಮನಗಂಡರು.

- ಕೆಲವರ ಬೋಧನೆ ಪರಿಣಾಮಕಾರಿಯಾಗಿದ್ದು, ವಿಶೇಷವಾಗಿ ಇಬ್ಬರು ಮಹಿಳಾ ಶಿಕ್ಷಕಿಯರು ಬಹುಮುಖ ಪ್ರತಿಭೆಗಳನ್ನು ಹೊಂದಿದ್ದುದು ಕಂಡುಬಂದಿತು. ಅವರು ವಿದ್ಯಾರ್ಥಿ ಮತ್ತು ಸಹದ್ಯೋಗಿಗಳಿಂದ ಪ್ರಶಂಸೆಗೆ ಒಳಪಟ್ಟಿದ್ದಾರೆ.
- ಇನ್ನೂ ಕೆಲವು ಶಿಕ್ಷಕರ ಬೋಧನೆ ಪರಿಣಾಮಕಾರಿಯಾಗಿಲ್ಲದೆ ಇರುವುದು ಕಂಡು ಬಂತು.
- ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾರ್ಥನಿಯದ ಹಾಜರಾತಿ ಉತ್ತಮವಾಗಿದ್ದರೂ ಸಹ, ಪ್ರೌಢ ಶಾಲೆಯಲ್ಲಿ ಶೇ. 25ರಷ್ಟು ಕ್ಷಿಣಿಸಿದ್ದು ಕಂಡು ಬಂತು.
- ವಿದ್ಯಾರ್ಥಿನಿಯರು ರಾಜ್ಯ ಪರೀಕ್ಷೆಗಳಲ್ಲಿ ಉತ್ತಮ ಸಾಧನೆಗೈದಿದ್ದು ಕಂಡು ಬಂತು.
- ಶೌಚಾಲಯಗಳು ಬಹಳ ದುಃಸ್ಥಿತಿಯಲ್ಲಿದ್ದು, ಅನಾರೋಗ್ಯಕರವಾಗಿವೆ. ಹುಡುಗಿಯರಿಗೆ,ಮಹಿಳೆಯರಿಗೆ ಕೇವಲ ಒಂದು ಶೌಚಾಲಯ ಮಾತ್ರ ಇದ್ದು, ಅದೂ ಸಹ ಪುರುಷರ ಬ್ಲಾಕ್ನಲ್ಲಿ ಇರುವುದು.
- ಹೊಸ ಶಿಕ್ಷಕರು ಉತ್ತಮವಾದ ಹೆಸರು ಪಡೆದಿದ್ದರೂ ಸಹ, ಭೋದಿಸುವ ಪ್ರಕ್ರಿಯೆಯಲ್ಲಿ ಹಾಗು ನಡವಳಿಕೆಗಳಲ್ಲಿ, ಹಲವಾರು ಸಮಸ್ಯೆಗಳಲ್ಲಿದ್ದಾರೆ.
- ಪಾಲಕರು ಮತ್ತು ಸ್ಥಳೀಯ ಸಮುದಾಯದವರು ಬಹಳ ನೆರವು ನೀಡುವಂತವರಾಗಿದ್ದಾರೆ..

ಶ್ರಿ.ಸಿಂಗ್ ರವರಿಗೆ ನೆನಗುದಿ ಉಂಟುಮಾಡಿದ ಸಂಗತಿಗಳೆಂದರೆ,

1. ಉನ್ನತ ಪ್ರೌಢ ತರಗತಿಗಳಲ್ಲಿ, ಹುಡಗಿಯರು, ಹೆಚ್ಚಿನ ಸಂಖ್ಯೆಯಲ್ಲಿ, ಬಿಡುತ್ತಿರುವುದರಿಂದ, ಶಾಲೆಯ ಫಲಿತಾಂಶಗಳಮೇಲೆ ಕೆಟ್ಟ ಪರಿಣಾಮ ಆಗುತ್ತಿರುವುದು
2. ಇದರಿಂದ ಸ್ಥಳೀಯ ಮಹಿಳೆಯರು, ಉತ್ತಮ ಭವಿಷ್ಯದ ಕಡೆ ಹೋಗುವುದು ದುರ್ಲಭವಾಗುತ್ತಿರುವುದು.

   ಶೌಚಾಲಯಗಳಿಂದ ಬರುತ್ತಿದ್ದ ದುರ್ವಾಸನೆ, ಅವರನ್ನು ನಿಧಾನವಾಗಿ ಹೆಣ್ಣುಮಕ್ಕಳ ಕಠಿಣ ಪರಿಸ್ಥಿತಿ ಬಗ್ಗೆ ಆಳವಾಗಿ ಯೋಚಿಸುವಂತೆ ಮಾಡಿತು. ಇದರ ಬಗ್ಗೆ ಪೋಷಕರು ಹಾಗು ಸ್ಥಳೀಯರು ಸಹ ಮಾತನಾಡಿದ್ದು, ಅವರ ನೆನಪಿನಲ್ಲಿತ್ತು. ಅವರ ದೈನಂದಿನ ತರಗತಿ ನಿರೀಕ್ಷಣೆಗಳು, ಶಕ್ತಿಶಾಲಿ ಮಹಿಳಾ ಶಿಕ್ಷರು, ಮಕ್ಕಳು ಹಾಗು ಇತರೇ ಶೀಕ್ಷಕರ ಮೇಲೆ ಮಾಧರಿಗಳಾಗುವ ಸಾಧ್ಯತೆಗಳನ್ನು ತೆರೆದಿತು.

   ಅವರಿಗೆ ಶಾಲೆಯ ಕಾಣ್ಕೆಯು ಶಾಲೆಯು ಎಲ್ಲ ಮಕ್ಕಳಿಗೂ ಉತ್ತಮ ಕಲಿಕೆಗೆ ಸಮಾನ ಅವಕಾಶಗಳ ಕಲ್ಪಿಸುವ ಅಂಶಗಳನ್ನು ಒಳಗೊಳ್ಳಬೇಕೆಂಬುದು ಸ್ಪಷ್ಟವಾಯಿತು.

ತರಬೇತಿಯ ಕೆಲವು ವಾರಗಳ ನಂತರ ಶ್ರೀ: ಸಿಂಗ್‌ರವರು, 6 ಜನ ಸಹೋದ್ಯೋಗಿಗಳ, ಹಾಗು ಶಾಲಾ ನಿರ್ವಹಣಾ ಸಮಿತಿ ಸದಸ್ಯರುಗಳ( 4 ಜನ ಪೋಷಕರು, ಇಬ್ಬರು ಸಮುದಾಯದ ಮುಖಂಡರು, ಹಾಗು ಒಬ್ಬ ವ್ಯಾಪಾರಸ್ಥ), ಜಂಟಿ ಸಭೆ ಕರೆದು ತಮ್ಮ ಆಲೋಚನೆಗಳನ್ನು ಹಂಚಿಕೊಂಡರು. ಇಷ್ಟರಲ್ಲಾಗಲೇ, ಎಲ್ಲರೂ ಅವರ ಕೋರ್ಸ್ ಬಗ್ಗೆ ಕೇಳಿ ತಿಳಿದಿದ್ದರು. ಅವರು ಶಾಲೆಯ ಆವರಣದಲ್ಲಿ ಮಾಡುತ್ತಿದ್ದ ನಿರೀಕ್ಷಣೆಗಳ ಬಗ್ಗೆ, ಶಾಲೆಯಲ್ಲಿ ಆಗುತ್ತಿದ್ದ ಚರ್ಚೆಗಳ ಬಗ್ಗೆ, ಅದರ ಸುಧಾರಣೆಯ ಬಗ್ಗೆ ಅವರ ಕಳಕಳಿ

ನೋಡಿದ್ದರು. ಸಿಂಗ್ ರು ಅವರನ್ನು 4–5 ಜನರ ಒಂದೊಮದು ಗುಂಪುಗಳಾಗಿ ಮಾಡಿ, ಪ್ರತೀ ಗುಂಪು, ಶಾಲೆಯ ಸುಧಾರಣೆಗೆ ಏನೇನು ಮಾಡಬೇಕು ಎಮದು ಪಟ್ಟಿ ಮಾಡಲು ಕೇಳಿಕೊಂಡರು. ಅವುಗಳನ್ನು ಆದ್ಯತೀಕರಿಸಿ, 3 ಮೌಲ್ಯ ಗಳನ್ನು ಹಾಗು 3 ತತ್ವಗಳನ್ನು ಗುರ್ತಿಸಲು ತಿಳಿಸಿದರು. ಎರಡೂ ಗುಂಪಿನವರು ತಮ್ಮಲ್ಲೆ ಚರ್ಚಿಸಿ,ಯಾದಿಗಳನ್ನು ತಯಾರಿಸಿದರು. ಎರಡೂ ಪಟ್ಟಿಗಳನ್ನು ಹೋಲಿಸಿದಾಗ ಹಲವಾರು ಸಾಮಾನ್ಯ ಮನರುಕ್ತಿಗಳು ಕಂಡುಬಂದವು. ಸಿಂಗ್ ರವರು ಅವನ್ನು ಪರಿಷ್ಕರಿಸಿ ಒಂದು ಪಟ್ಟಿ ತಯಾರಿಸಿ ಮುಂದಿನ ಸಭೆಯಲ್ಲಿ ಮಂಡಿಸುವುದಕ್ಕೆ ಒಪ್ಪಿಕೊಂಡರು.

ಒಂದು ವಾರದ ನಂತರ ಮತ್ತೆ ಸಭೆ ಸೇರಿಸಲಾಯಿತು. ಈ ಸಭೆಯಲ್ಲಿ, ಪ್ರತಿ ಗುಂಪಿನವರು, ಮೊದಲೇ ಒಪ್ಪಿಕೊಂಡ ತತ್ವಗಳ ಹಿನ್ನೆಲೆಯಲ್ಲಿ ಸಂವಾದ ಮುಂದುವರಿಸಿ, ಶಾಲೆಗೆ ಕಾಣ್ಕೆಯನ್ನು ರಚಿಸಿದರು. ತುಂಬಾ ಚರ್ಚೆಯ ನಂತರ ಹೀಗೆ ಕಾಣ್ಕೆಯ ಹೇಳಿಕೆಯನ್ನು ತಯಾರಿಸಲಾಯಿತು: “ ಈ ಶಾಲೆಯಲ್ಲಿ ಎಲ್ಲ ಮಕ್ಕಳನ್ನು ಗೌರವದಿಂದ ಕಾಣಲಾಗುತ್ತದೆಯಲ್ಲದೆ, ಅವರನ್ನು ಕಾಳಜಿಯಿಂದ ನೋಡಿಕೊಳ್ಳುವುದರ ಜೊತೆಗೆ ಅವರ ಧನಾತ್ಮಕ ಶಕ್ತಿವರ್ಧನೆಗೆ ಅವಕಾಶ ಕಲ್ಪಿಸಲಾಗುತ್ತದೆ.”.

ಎಲ್ಲಾ ಬಾಗಿದಾರರು ಸೇರಿಕೊಂಡು ಹೇಗೆ ಒಟ್ಟಿಗೆ ಸೇರಿ, ಸಂವಾದದ ಮೂಲಕ, ಎಲ್ಲರಿಗೂ ಸಮರ್ಪಕವೆನಿಸುವ ಒಂದು ಕಾಣ್ಕೆಯನ್ನು ರಚಿಸುವುದಕ್ಕೆ ಕೆಲಸ ಮಾಡಿದರೆಂಬುದನ್ನು ಗಮನಿಸಿರಿ. ಆದರೆ, ಈ ಮದ್ಯೆ, ಸಿಂಗರವರು, ತುಂಬಾ ಜನ ಬೇರೆ ಬೇರೆ ಭಾಗೀದಾರರೊಂದಿಗೆ, ಸಂವಾದವನ್ನು ಹಲವು ಹಂತಗಳಲ್ಲಿ ನಡೆಸಿದ್ದರು. ಅವರ ಅಭಿಪ್ರಾಯವನ್ನು ಕೇಳಿದ್ದರು ಮತ್ತು ಶಾಲೆಯ ಕೇಂದ್ರ ಉದ್ದೇಶ ಏನಿರಬೇಕೆಂಬುದರ ಬಗ್ಗೆ ಅವರೆಲ್ಲರೂ ಯೋಚಿಸಲು ನೆರವು, ಪ್ರೋತ್ಸಾಹ ನೀಡಿದರು. ಹೀಗಾಗಿ, ಶಾಲೆಯ ಕಾಣ್ಕೆ, ಇಡೀ ಸಮುದಾಯದ ಪ್ರತಿಬಿಂಬವಾಗಿ ಹೊರಬಂದಿತು.

### ಚಟುವಟಿಕೆ 3: ನಿಮ್ಮ ಶಾಲೆಗೆ ಒಂದು ಕಾಣ್ಕೆಎನ್ನು ರಚಿಸುವುದು.

ಈ ಚಟುವಟಿಕೆಯಲ್ಲಿ ನಿಮ್ಮ ಶಾಲೆಗೆ ಒಂದು ಕಾಣ್ಕೆಯನ್ನು ರಚಿಸಲು ಒಂದು ಯೋಜನೆ ತಯಾರಿಸುವಿರಿ.

- ಶ್ರೀ.ಸಿಂಗ್ ಮಾಡಿದಂತೆ, ನೀವೂ ಸಹ ಶಿಕ್ಷಕರೊಂದಿಗೆ, ಪೋಷಕರೊಂದಿಗೆ, ವಿಧ್ಯಾರ್ಥಿಗಳೊಂದಿಗೆ, ಸಮುದಾಯದೊಂದಿಗೆ, ಶಾಲಾ ನಿರ್ವಹಣಾಸಮಿತಿಯವರೊಂದಿಗೆ, ಅವರು ಈ ಶಾಲೆಯನ್ನು ಹೇಗೆ ನೋಡುತ್ತಾರೆ, ಶಾಲೆಯಿಂದ ಏನು ಬಯಸುತ್ತಾರೆ, ಶಾಲೆಗಾಗಿ ಏನು ಮಾಡಲು ಸಿದ್ದರಿದ್ದಾರೆ, ಶಾಲೆಯಲ್ಲಿ ಯಾವ ಸುಧಾರಣೆಗಳನ್ನು ಬಯಸುತ್ತಾರೆ ಇತ್ಯಾದಿ ವಿಷಯಗಳ ಬಗ್ಗೆ ಅಭಿಪ್ರಾಯ ಸಂಗ್ರಹಿಸಲು ಎರಡು ವಾರಗಳಷ್ಟು ಸಮಯ ವಿನಿಯೋಗಿಸಿರಿ.(ಘಟಕ–‘ನಾಯಕತ್ವದ ದೃಷ್ಟಿಕೋನ–ಶಾಲೆಯ ಸ್ವ ಮೌಲ್ಯಮಾಪನ ಮುನ್ನಡೆಸುವುದು’ ಇದರ ಬಗ್ಗೆ ನಿಮಗೆ ಕೆಲವು ಉಪಾಯಗಳನ್ನು ನೀಡಬಹುದು)
- ನಿಮ್ಮ ಕಲಿಕಾ ದಿನಚರಿಯಲ್ಲಿ, ನಿಮ್ಮ ಕಾಣ್ಕೆಯನ್ನು ರಚಿಸಲು, ಎಲ್ಲಾ ಬಾಗೀದಾರರೊಂದಿಗೆ 2 ಜಂಟಿ ಸಭೆಗಳನ್ನು ಹೇಗೆ ನಡೆಸುವಿರಿ ಎಂಬ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಿ.

## 5 ಕಾಣ್ಕೆಯಿಂದ ಕಾರ್ಯರೂಪಕ್ಕೆ

ಕಾಣ್ಕೆ ಯು ಎಲ್ಲ ಅಭಿವೃದ್ಧಿಗೆ ಒಂದು ಮಾನದಂಡದ ಚೌಕಟ್ಟನ್ನು ನೀಡುವುದರಿಂದ ಅದರ ಹೇಳಿಕೆ ಮಹತ್ವದ್ದಾಗಿದೆ. ನೀವು ಮತ್ತು ನಿಮ್ಮ ಸಿಬ್ಬಂದಿ ತೆಗೆದುಕೊಳ್ಳುವ ಯಾವ ನಿರ್ಣಯವನ್ನು, ಕೆಲಸಗಳನ್ನು, ‘ಇದು ನಮ್ಮ ಶಾಲೆಯ ಕಾಣ್ಕೆಗೆ ಅನುಗುಣವಾಗಿದೆಯೇ?’ ಎಂದು ಪರೀಕ್ಷಿಸಿಕೊಳ್ಳಬಹುದು.

ಕಾಣ್ಕೆಯು ಒಂದು ಸಣ್ಣ ಹೇಳಿಕೆಯ ರೂಪದಲ್ಲಿರುವುದರಿಂದ, ಅದು ಒಂದು ಶಾಲೆಯು ಏನನ್ನು ಪ್ರತಿನಿದಿಸುತ್ತದೆ ಎಂಬುದನ್ನು ಸಂಕ್ಷಿಪ್ತವಾಗಿ ಮಾತ್ರ ಹೇಳಬಹುದು. ಇದನ್ನು ಹಲವಾರು ಸಣ್ಣ, ಸಣ್ಣ ಸವಿವರವಾದ ಧ್ಯೇಯ ವಾಕ್ಯಗಳಾಗಿ ವಿಸ್ತರಿಸಿದಾಗ, ಅವು ಕಾರ್ಯಸೂಚಿ ಮಾರ್ಗದರ್ಶಿ ಸೂತ್ರಗಳಾಗಿ ಸಹಾಯವಾಗುತ್ತವೆ. ಇಂತಹ ಧ್ಯೇಯವಾಕ್ಯಗಳಿಗೂ, ಕಾಣ್ಕೆಯ ವಾಕ್ಯಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದು, ನಾಯಕತ್ವದ ತಂಡಕ್ಕೆ ಅತ್ಯವಷ್ಯಕ.

ತಕ್ತೆ 2. ಕಾಣ್ಕೆಯ ವಾಕ್ಯಕ್ಕೂ, ಧ್ಯೇಯವಾಕ್ಯಗಳಿಗೂ ಇರುವ ವ್ಯತ್ಯಾಸಗಳು(ಡಿಫ್ಟಿನ್ ಅವರಿಂದ ಪಡೆಯಲಾಗಿದೆ)

| ವ್ಯತ್ಯಾಸಗಳು | ಕಾಣ್ಕೆಯ ವಾಕ್ಯ | ಧ್ಯೇಯವಾಕ್ಯ |
|---|---|---|
| ವಿವರಣೆ | ನೀವು ಎಲ್ಲಿರಬೇಕೆಂದು ಹೇಳುತ್ತದೆ<br>ಮೌಲ್ಯಗಳು ಮತ್ತು ಉದ್ದೇಶಗಳೆರಡನ್ನು ತಿಳಿಸುತ್ತದೆ | ನೀವು ಎಲ್ಲಿಗೆ ಮತ್ತು ಹೇಗೆ ಹೋಗಬಹುದೆಂದು ಸೂಚಿಸುತ್ತದೆ.<br>ಪ್ರಾಥಮಿಕ ಗುರಿ ಮತ್ತು ಉದ್ದೇಶಗಳನ್ನು ತಿಳಿಸುತ್ತವೆ. |
| ಉತ್ತರ | ನಾವು ಗುರಿ ಎಲ್ಲಿಗಿಡಬೇಕು ಎಂದು ವಿವರಿಸುತ್ತದೆ | ನಾವು ಹೇಗೆ ವಿಭಿನ್ನ? ನಾವು ಏನು ಮಾಡಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರ ನೀಡುತ್ತವೆ. |

| ವ್ಯತ್ಯಾಸಗಳು | ಕಾಣ್ಕೆಯ ವಾಕ್ಯ | ಧ್ಯೇಯವಾಕ್ಯ |
|---|---|---|
| ವೇಳೆ/ಅವಧಿ | ಭವಿಷ್ಯತ್ತಿನ ಕುರಿತು ಹೇಳುವುದು | ವರ್ತಮಾನದಿಂದ ಭವಿಷ್ಯತ್ತಿನ ಕುರಿತು ಹೇಳುವುದು |
| ಕಾರ್ಯ | ನೀವು ಮಂದಿನ ಕೆಲವು ವ್ಷರ್ಷಗಳಲ್ಲಿ ಎಲ್ಲಿರಬಯಸುತ್ತೀರಿ ಎಂಬುದನ್ನು ತೋರಿಸುತ್ತದೆ. ಮಾರ್ಗವನ್ನು ರೂಪಿಸುತ್ತದೆ ಮತ್ತು ಸ್ಪೂರ್ತಿ ಕೊಡುತ್ತದೆ. | ಶಾಲೆಯ ಹುಟ್ಟಿನ ಗುರಿಗಳ ಬಗ್ಗೆ ವಿವರ ನೀಡುವುವು.<br>ನಾಯಕತ್ವದ ತಂಡ ಹಾಗು ಬಾಗಿದಾರರಿಗೆ, ಯಶಸ್ಸಿನ ಅಳತೆಗೋಲುಗಳನ್ನು ನೀಡುವವು. |
| ಬದಲಾವಣೆ | ಕೇವಲ ಕಾರ್ಯಸೂಚಿಯಾಗಿರದೆ, ಮೌಲ್ಯಗಳನ್ನು ಪ್ರತಿನಿದಿಸುವುದರಿಂದ, ಅದು ಸ್ಥಿರತೆ ಹೊಂದಿರುತ್ತದೆ. | ಕಾಣ್ಕೆಯ ಮೂಲದಿಂದ ಬಂದಿದ್ದರೂ, ಅವು ಶಿಷ್ಯರ ಆದ್ಯತೆ ಮತ್ತು, ಅವಶ್ಯಕತೆಗಳಿಗನುಸಾರ ಬದಲಾಗಬಹುದು. |
| ವಾಕ್ಯದ ವಿಸ್ತರಣೆ | ಎಲ್ಲಿಗೆ, ಯಾಕೆ, ಯಾವಾಗ, ಮತ್ತು ಹೇಗೆ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. | ಏನನ್ನು, ಯಾರಿಗೆ, ಯಾಕೆ, ಹೇಗೆ ಮಾಡಬಹುದೆಂದು ಹೇಳುತ್ತವೆ. |
| ಸ್ಪಷ್ಟತೆಯ ಲಕ್ಷಣಗಳು | ಸ್ಪಷ್ಟತೆ ಮತ್ತು ದ್ವಂದ್ವಾರ್ಥ ಇಲ್ಲದೇ ಇರುವುದು<br>ಪ್ರಜ್ವಲ ಭವಿಷ್ಯದ ಬಗ್ಗೆ ವಿವರಿಸುವುದು (ಧನಾತ್ಮಕ) | ಮೌಲ್ಯಗಳು ಮತ್ತು ಉದ್ದೇಶಗಳು ಕಾರ್ಯಗತಗೊಳಿಸುವುದು |

2 ಮತ್ತು 3 ರ ವ್ಯಕ್ತಿ ಅಧ್ಯಯನದಲ್ಲಿ ಶ್ರೀ: ಸಿಂಗ್‌ರವರು ತಮ್ಮ ದೃಷ್ಠಿಕೋನದ ಹೇಳಿಕೆಯ ಚೌಕಟ್ಟನ್ನು ನಿರ್ಮಿಸಿದರು ತಮ್ಮ ಹಿರಿಯ ನಾಯಕರೊಂದಿಗೆ ಕೆಲಸ ಮಾಡಿ ಮತ್ತು ಪ್ರಶ್ನಿಸಿದರು. 'ಇದು ನಮ್ಮ ಕಾಣ್ಕೆಯಾಗಿದ್ದರೆ ನಾವು ಇದನ್ನು ನೈಜವಾಗಿಸಲು ಏನು ಮಾಡಬೇಕು ?'
ಕಾಣ್ಕೆಯ ಹೇಳಿಕೆಯು ಒಮ್ಮೆ ಸ್ಥಿರಗೊಂಡ ಬಳಿಕ ಅದನ್ನು ಅನುಷ್ಠಾನಕ್ಕೆ ತರಲು ಹಲವಾರು ಧ್ಯೇಯವಾಕ್ಯಗಳನ್ನು ರಚಿಸಬೇಕಾಗುತ್ತದೆ. ಅವು ಶಾಲೆಯ ಸದ್ಯದ ಪರಿಸ್ಥಿತಿ ಹಾಗು ಸ್ವಮೌಲ್ಯಮಾಪನದಿಂದ ಬಂದ ಅಂಶಗಳ ಆಧಾರದಿಂದ ರಚಿಸಬೇಕಾಗುತ್ತದೆ.
ಯಾವುದೇ ತೆರೆನಾದ ವಿಮರ್ಶೆಯು ಹೆಚ್ಚಿನ ಕ್ರಿಯೆಗಳಿಗೆ ಕಾರಣವಾಗುತ್ತದೆ. ಇಲ್ಲಿ, ಕ್ರಿಯೆಗಳ ಆದ್ಯತೀಕರಣಕ್ಕೆ ಕಾಣ್ಕೆಯ ಮಾರ್ಗದರ್ಶನವು ಅತಿ ಮುಖ್ಯವಾಗುತ್ತದೆ.

ಎಲ್ಲ ಮಾಹಿತಿಗಳ ಆಧಾರದ ಮೇಲೆ ಶ್ರೀ: ಸಿಂಗ್‌ರವರು ಮತ್ತು ಅವರ ತಂಡವು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ತಮ್ಮ ಬೋಧನೆಯಲ್ಲಿ ಬದಲಾವಣೆ ಮತ್ತು ನಿರ್ದಿಷ್ಟ ಹೆಜೆಗಳನ್ನು ತೆಗೆದುಕೊಂಡಾಗ ಮಾತ್ರ ಎಲ್ಲ ವಿದ್ಯಾರ್ಥಿಗಳಿಗೆ ಸಮಾನ ಅವಕಾಶ ಒದಗಿಸಲು ಸಾಧ್ಯೆಂಬುದನ್ನು ಮನಗಂಡರು. 2 ಮುಖ್ಯ ಆದ್ಯತಾಅಂಶಗಳನ್ನು ಗುರುತಿಸಿದರು

- ಶಾಲೆಯಲ್ಲಿ ವಿದ್ಯಾರ್ಥಿನಿಯರ ದಾಖಲಾತಿಯನ್ನು ಹೆಚ್ಚಿಸುವುದು
- ಇಡೀ ಶಾಲೆಯಲ್ಲಿ ಭೊದನೆ ಪ್ರಕ್ರಿಯೆಗಳಲ್ಲಿ ಸುಧಾರಣೆ ತರುವುದು
  ಈ ಆದ್ಯತೆಗಳು ಕೆಲವು ನಿರ್ದಿಷ್ಟ ಕ್ರಿಯೆಗಳ ಕಡೆಗೆ ನಮ್ಮನ್ನು ಮುನ್ನಡೆಯಲು ಸೂಚಿಸುತ್ತವೆ
- ವಿದ್ಯಾರ್ಥಿನಿಯರಿಗಾಗಿ ಹೊಸ ಶೌಚಾಲಯಗಳನ್ನು ನಿರ್ಮಿಸಲು ಸಂಪನ್ಮೂಲ ಸಂಗ್ರಹಣೆ ಹಾಗು ಜಿಲ್ಲಾಡಳಿತದ ಸಹಾಯ ತೆಗೆದುಕೊಳ್ಳುವುದು.
- ಗ್ರಾಮದಲ್ಲಿ ಹೆಣ್ಣುಮಕ್ಕಳ ದಾಖಲಾತಿ ಆಂದೋಲನವನ್ನು ಹಮ್ಮಿಕೊಂಡು, ಅದರಲ್ಲಿ ಶಾಲೆಯ ಮಾಜೀ ವಿಧ್ಯಾರ್ಥಿನಿಗಳನ್ನು (ಹಾಗು ಸದ್ಯದಲ್ಲಿ ಉನ್ನತ ವ್ಯಾಸಂಗದಲ್ಲಿ ತೊಡಗಿಕೊಂಡಿರುವವರನ್ನು) ತೊಡಗಿಸಿಕೊಳ್ಳುವುದು
- ಒಳ್ಳೆಯ ಪ್ರತಿಭೆ ಹಾಗು ಅನುಭವ ಮಹಿಳಾ ಶಿಕ್ಷಕರನ್ನು ಅವರ ಉತ್ತಮ ಬೋದನೆ ಮಾದರಿಗಾಗಿ ಪ್ರೋತ್ಸಾಹಿಸಿ,ಇತರರಿಗೆ ಮಾದರಿಗಳಾಗಿ, ಮಾರ್ಗದರ್ಶಕರಾಗಿರಲು ನೇಮಿಸಿಕೊಳ್ಳುವದು.
- TESS ಇಂಡಿಯಾದ ಮೂಲ ಸಂಪನ್ಮೂಲಗಳನ್ನು ಕಲಿಕಾ ಮೌಲ್ಯಮಾಪನಕ್ಕಾಗಿ ಬಳಸಿಕೊಂಡು, ಇದರಿಂದ ವಿದ್ಯಾರ್ಥಿಗಳು ತಮ್ಮ ಕಲಿಕಾ ಪ್ರಗತಿಯ ಬಗ್ಗೆ ಜವಾಬ್ದಾರಿ ತೆಗೆದುಕೊಳ್ಳಲು ಸಹಾಯ ಮಾಡುವುದು.

ಶಾಲಾ ಸ್ವಯಂ ಮೌಲ್ಯಮಾಪನದ ಬಗ್ಗೆ, ಶಾಲಾ ಆಭಿವೃದ್ಧಿ ಯೋಜನೆ ತಯಾರಿಕೆ ಬಗ್ಗೆ, ನಾಯಕತ್ವ ಘಟಕಗಳಿದ್ದು, ಅವು ಈ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಚಟುವಟಿಕೆಗಳ ಮಾಹಿತಿಯನ್ನು ನೀಡುತ್ತವೆ. ಕಾಣ್ಕೆಯ ಉದ್ದೇಶ, ಶಾಲಾನಾಯಕರಿಗೆ ಚಟುವಟಿಕೆಗಳ ಆದ್ಯತೀಕರಣ ಮಾಡಲು, ಅವನ್ನು ಗುರ್ತಿಸಲು ಹಾಗು ಅವನ್ನು ಶಾಲಾ ಯೋಜನೆಯಲ್ಲಿ ಸೇರಿಸಲು ಸಹಾಯ ಮಾಡುತ್ತವೆ.

# 6. ಕಾಣ್ಕೆಯ ಪ್ರಗತಿಯ ಮೇಲುಸ್ತುವಾರಿ:

ಒಮ್ಮೆ ಕಾರ್ಯಗಳನ್ನು ಗುರಿತಿಸಿದ ನಂತರ ಶಾಲಾ ನಾಯಕರು ಅವುಗಳ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ವಹಿಸಿಕೊಂಡು ಶಾಲಾ ಪ್ರಗಿತಿಗೆ ಸಹಾಯಕವಾಗುವುದು ನಾಯಕತ್ವ ಘಟಕದಲ್ಲಿ ಪುನರಾವಲೋಕನ ಯೋಜನೆ, ಪುನರ ಯೋಜನೆ ಕಾರ್ಯರೂಪ ಮತ್ತು ಪುನರಾವಲೋಕನವನ್ನು ಕುರಿತು ಚಿಂತಿಸಲು ಪ್ರೊತ್ಸಾಹಿಸುವದು ಎಲ್ಲ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಿ ಮುಂದಿನ ವರ್ಷ ಹೊಸ ಯೋಜನೆಯೊಂದನ್ನು ರೂಪಿಸಲು ಮಾಹಿತಿಗಳನ್ನು ಸಂಗ್ರಹಿಸುವುದು.

ಈ ಪ್ರಕ್ರಿಯೆಗಳ ಅಂಗವಾಗಿ ಕಾಣ್ಕೆ– ಹೇಳಿಕೆಯ ಪುನರ್ಮನನ ಅಗತ್ಯವಾಗಿದೆ ಮತ್ತು ಅದು ಉದ್ದೇಶ ಈಡೇರಿಸಲು ಶಕ್ತವಾಗಿದೆ ಎಂಬುದನ್ನು ಖಾತ್ರಿಮಾಡಿಕೊಳ್ಳಬೇಕಾಗುವುದು. ಶಾಲೆಯು ಅಭಿವೃದ್ಧಿ ಹೊಂದಿದಂತೆಲ್ಲ, ಸರಕಾರದ ಶಿಕ್ಷಣನೀತಿಯಲ್ಲಿ ಬದಲಾವಣೆಯಾದಂತೆಲ್ಲ, ಹೊಸ ಆದ್ಯತೆಗಳು ಹುಟ್ಟಿದಂತೆಲ್ಲಾ, ನಿಮ್ಮ ಕಾಣ್ಕೆಯನ್ನೂ ಸಹ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ.

ಶಾಲಾ ನಾಯಕರಾಗಿ, ಸಮುಯದಾಯದೊಂದಿಗೆ, ಶಿಕ್ಷಕರೊಂದಿಗೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವುದು ಮಹತ್ವದ್ದು. ಅವರು ನೀವು ಹೇಳಿದ ಕೆಲಸ ಮಾಡುವಂತೆ ಮಾಡಲು, ನಿಮ್ಮ ತೀರ್ಮಾನಗಳಿಗೆ ಬೆಲೆ,ಗೌರವ ಕೊಡಬೇಕಾದರೆ, ನಿಮ್ಮಲ್ಲಿ ಕೆಲವು ವಿಶಿಷ್ಟ ಗುಣ ಮತ್ತು ಕೌಶಲಗಳನ್ನು

ಹೊಂದಿರಬೇಕಗುತ್ತದೆ. ಆದರೆ, ಒಂದು ಸ್ಪಷ್ಟವಾದ, ಸರ್ವಸಮ್ಮತವಾದ ಕಾಣ್ಕೆ ಹೊಂದಿದ್ದರೆ, ನಿಮಗೆ ಈ ನಿಟ್ಟಿನಲ್ಲಿ ಪೂರಕವಾಗುತ್ತದೆ. ಬೇರೆಯವರೊಡನೆ,ಯಾವುದೊಂದು ಕ್ರಿಯೆಯನ್ನು ಚರ್ಚಿಸುವುವಾಗ, ಕಾಣ್ಕೆಗೆ ಅದು ಪೂರಕವಾಗಿದ್ದಲ್ಲಿ, ಅವರನ್ನು ಒಪ್ಪಿಸುವಲ್ಲಿ, ಸುಲುಭಸಾಧ್ಯವಾಗುವುದು. ಕೊನೆಯ ವ್ಯಕ್ತಿಗತ ಅಧ್ಯಯನದಲ್ಲಿ ಶ್ರೀ: ನಾಗರಾಜುರವರು ಹೇಗೆ ಶಾಲಾ ಬಾಗಿದಾರರನ್ನು ಒಂದುಗೂಡಿಸಿ ಹೊಸ ದೃಷ್ಟಿಕೋನವನ್ನು ನಿರ್ಮಿಸಿ ಮತ್ತು ಅದರಲ್ಲಿ ಭಾಗವಹಿಸಿ ಮೇಲ್ವಿಚಾರಣೆ ಮಾಡುತ್ತಾರೆ ಎಂಬುದು ಗಮನಾರ್ಹ.

## ವ್ಯಕ್ತಿ ಅಧ್ಯಯನ 4 ಶ್ರೀ: ನಾಗರಾಜು ರವರು ಶಿಕ್ಷಕರ ಹೃದಯ ಗೆದ್ದರು:

ಶ್ರೀ: ನಾಗರಾಜು ರವರು ಜಿಲ್ಲಾ ಶಿಕ್ಷಣ ಕಚೇರಿಯಿಂದ ಒಂದು ಸಣ್ಣ ಗ್ರಾಮೀಣ ಪ್ರೌಢ ಶಾಲೆಗೆ ವರ್ಗಾಯಿಸಲ್ಪಟ್ಟರು. ಆ ಶಾಲೆಯ ಬಗ್ಗೆ ಸ್ಥಳೀಯ ಸಮುದಾಯದಲ್ಲಿ ಗೌರವವಿರಲಿಲ್ಲ. ಅದಕ್ಕೆ, ಕಾರಣ ಹಿಂದೆ ಇದ್ದ ಒಬ್ಬ ಶಾಲಾ ನಾಯಕರು ಶಾಲೆಯ ಸಂಪನ್ಮೂಲ ದುರುಪಯೋಗ ಮಾಡಿಕೊಂಡು ಹೋಗಿದ್ದುದು, ಹಾಗು ಇವರು ಮೊದಲು ಬಂದ ಹೊಸ ಶಾಲಾ ನಾಯಕರು ಸ್ಥಳೀಯ ಸಮುದಾಯದಲ್ಲಿನ ಈ ಶಾಲೆಯ ಬಗ್ಗೆ ಇದ್ದ ತಿರಸ್ಕಾರ, ಸಿಬ್ಬಂದಿ ಬಗ್ಗೆ ಇದ್ದ ದ್ವೇಷಗಳನ್ನು ಕಂಡು ಒತ್ತಡಕ್ಕೆ ಒಳಪಟ್ಟು ಕೇವಲ 2 ವರ್ಷದಲ್ಲಿ ಕೆಲಸವನ್ನು ತ್ಯಜಿಸಿದರು. ಶ್ರೀ ನಾಗರಾಜರವರು ಶಾಲಾನಾಯಕರಾಗಿ ಸೇರಿದಾಗ ಇದ್ದ ಈ ಪರಿಸ್ಥಿತಿಯನ್ನು, ಸವಾಲನ್ನು ಸ್ವೀಕರಿಸಿದರು.

ಮೊದಲನೆಯ ಅವಧಿಯಲ್ಲಿ ನಾಗರಾಜರವರು ನೋಡುವುದು ಮತ್ತು ಕೇಳುವುದು ಇವನ್ನೇ ಮಾಡಿ ಸಾಕಷ್ಟು ವಿಷಯ ತಿಳಿದುಕೊಂಡರು. ಅವರು ಶಾಲಯಲ್ಲಿ ತಿರುಗಾಡುತ್ತ ವಿದ್ಯಾರ್ಥಿ ಗಳೊಂದಿಗೆ, ಪಾಲಕರೊಂದಿಗೆ ಶಿಕ್ಷಕರೊಂದಿಗೆ, ಮುಂಜಾನೆ ಹಾಗೂ ಸಾಯಂಕಾಲದಲ್ಲಿ ಭೇಟಿಯಾಗಿ ಸಂವಾದಿಸಿದರು ಮತ್ತು ಶಾಲೆಯ ಬಗ್ಗೆ ಅವರ ಅನಿಸಿಕೆ, ಕಳಕಳಿಗಳನ್ನು ಅರ್ಥ ಮಾಡಿಕೊಂಡರು. ಜನರಲ್ಲಿದ್ದ ತೀವ್ರ ಅನಾಸಕ್ತಿಯನ್ನು, ಕುಸಿದಿದ್ದ ನೈತಿಕ ಸ್ಥೈರ್ಯವನ್ನೂ ಕಂಡು, ಈ ಸನ್ನಿವೇಶದಲ್ಲಿ, ಶಾಲೆಯ ಕಾಣ್ಕೆಯ ಬಗ್ಗೆ ಚರ್ಚಿಸಲು ಸಕಾಲವಲ್ಲವೆಂದು ಅರಿತರು.

ಈ ಪರಿಸ್ಥಿತಿಯಲ್ಲಿ, ಶಿಕ್ಷಕ ವೃಂದ ಮಾತ್ರವೇ ತಮ್ಮ ಶಾಲಾಸುಧಾರಣೆ ಕಾರ್ಯದಲ್ಲಿ ಸಂಗಾತಿಗಳಾಗಲು, ಆ ಮೂಲಕ ಮಹತ್ವದ ಪಾತ್ರ ವಹಿಸಬಹುದು ಎಂದು ಅವರು ಮನಗಂಡರು. ಅವರೊಂದಿಗೆ ಸಂವಹಿಸುತ್ತಾ, ಅವರ ಬದುಕು ಸರಳವಾಗಿಸಲು ಪ್ರಯತ್ನಿಸಿದರು. ಉದಾಹರಣೆಗೆ : ಅಲಮಾರಿಗಳಲ್ಲಿ ಇದ್ದಂತಹ ಪಾಠೋಪಕರಣಗಳ ಬಳಕೆಗೆ ಅನುವು ಮಾಡಿದರು; ತಮ್ಮ ಲ್ಯಾಪ್ ಟಾಪ್ ನಲ್ಲಿದ್ದ ಕಾರ್ಟೂನ್ ಗಳನ್ನು ಇಂಗ್ಲೀಷ್ ಭಾಷಾ ಬೆಳವಣಿಗೆಗೆ ಸಹಾಯಕವಾಗಿ ಬಳಸುವುದಕ್ಕೆ ನೀಡಿದರು; ಮತ್ತು ಸೋಲಾರ್ ಲ್ಯಾಂಪನ್ನು ಹಾಕಿ ಮನೆಯಲ್ಲಿ ವಿದ್ಯುತ್ ಸೌಲಭ್ಯವಿಲ್ಲದ, 10 ನೆಯ ತರಗತಿಯ ವಿಧ್ಯಾರ್ಥಿಗಳಿಗೆ, ರಾತ್ರಿ ವೇಳೆ ಅಭ್ಯಸಿಸಲು ಅವಕಾಶ ಕಲ್ಪಿಸುವುದು, ಇತ್ಯಾದಿ. ಇದರಿಂದ ಮೊದಲನೆಯ ವರ್ಷದ ಅಂತ್ಯಕ್ಕೆ ಪರೀಕ್ಷೆಗಳಲ್ಲಿ ಉತ್ತಮ ಪ್ರಗತಿ ಕಂಡು ಬಂತು.

ಇವೆಲ್ಲದರಿಂದ, ಎರಡನೆಯ ವರ್ಷದ ಅವಧಿಯಲ್ಲಿ ಶಿಕ್ಷಕರ,ವಿದ್ಯಾರ್ಥಿಗಳ ನೈತಿಕಸ್ಥೈರ್ಯದಲ್ಲಿ ಬಹಳ ಸುಧಾರಣೆಯಾಯಿತು. ಶ್ರೀ ನಾಗರಾಜುರವರು ತಗೆದುಕೊಂಡ ಕ್ರಮಗಳಿಂದ ಸುಧಾರಣೆ ಕಂಡ ಶಿಕ್ಷಕರು, ಅವರನ್ನು ಪ್ರಶಂಸಿಸಿದರು, ಮತ್ತು ಅವರನ್ನು ಗೌರವಿಸತೊಡಗಿದರು. ಮಕ್ಕಳ ಕಲಿಕೆಯಲ್ಲಿ, ಪರಿಕ್ಷೆಯಲ್ಲಾದ ಉತ್ತಮ ಪಲಿತಾಂಶಗಳಿಂದ, ಸ್ಥಳೀಯ ಸಮುದಾಯದವರು ಶಾಲಾ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸತೊಡಗಿದರು.

ತಮ್ಮ ಎರಡನೆ ವರ್ಷದ ಮೊದಲ ಅವಧಿಯಲ್ಲಿ ಹಲವು ಸರಣಿ ಸಭೆಗಳನ್ನು ಏರ್ಪಡಿಸಿ ಲಾ ಮೂಲಕ ಎರಡನೆಯ ವರ್ಷದಎರಡನೇ ಅವದಿಯಲ್ಲಿ, ಕಾಣ್ಕೆಯ ಹೇಳಿಕೆಯನ್ನು ಗುರುತಿಸಿದರು. ವರ್ಷದ ಅಂತ್ಯದಲ್ಲಿ ಶಿಕ್ಷಕರು ಮತ್ತು ಎಸ್.ಎಂ.ಸಿಯವರು ಶಾಲಾ ಅಗತ್ಯತೆಗಳನ್ನು ಹಾಗೂ ಬೆಳವಣಿಗೆಯ ಯೋಜನೆಗಳನ್ನು ಗುರುತಿಸಿದರು.

ಶಾಲಾ ಉದ್ದೇಶಕ್ಕಿಂತ ಕಾಣ್ಕೆಯ ಹೇಳಿಕೆ ಅತ್ಯಂತ ಮಹತ್ವ ಪೂರ್ಣವಾಗಿದೆ. ಮೂರು ತಿಂಗಳಿಗೊಮ್ಮೆ ಶ್ರೀ ನಾಗರಾಜರವರು ಇಬ್ಬರು ಎಸ್.ಎಮ.ಸಿ. ಸದಸ್ಯರೊಂದಿಗೆ ಚರ್ಚೆಯನ್ನು ಏರ್ಪಡಿಸಿದರು. ಪಾಲಕರನ್ನು ಆಹ್ವಾನಿಸಿದರು. ಇಂತಹ ಸಭೆಗಳ ಜವಾಬ್ದಾರಿಗಳನ್ನು ಹಳೆಯ ವಿದ್ಯಾರ್ಥಿಗಳೇ ವಹಿಸಿಕೊಂಡರು. ನಾಗರಾಜುರವರು, ಇಂತಹ ಸಭೆಗಳನ್ನು ಎಷ್ಟರಮಟ್ಟಿಗೆ ಶಾಲಾ ಚಟುವಟಿಗೆಗಳಲ್ಲಿ, ವಿದ್ಯಾರ್ಥಿಗಳು, ಹಾಗು ಪೋಷಕರು ಒಳಗೊಳ್ಳುತ್ತಿದ್ದಾರೆ ಎಂಬುದರ ಉಸ್ತುವಾರಿ ಮಾನಕಗಳಾಗಿ ಬಳಿಸಿಕೊಂಡರು; ಏಕೆಂದರೆ,ಇದು ಅವರ ಶಾಲೆಯ ಕಾಣ್ಕೆಯ ಕೇಂದ್ರ ಬಿಂದುವಾಗಿತ್ತು.

ಅವರು ಪಾಲಕರಿಗೆ ಕೆಲವು ಮಹತ್ವದ ವಿಷಯದಲ್ಲಿ ವೋಟು ಮಾಡುವುದಕ್ಕೆ ಬಾಟ್ಲಿಗಳ ಮುಚ್ಚಳವನ್ನು ಉಪಯೋಗಿಸುವ ಹೊಸ ವಿಧಾನವನ್ನು ಕಂಡುಹಿಡಿದರು. ಹಲವಾರು ವಿಷಯಗಳ ಬಗ್ಗೆ ಆಗಮನ ಮತ್ತು ನಿರ್ಗಮನ ಬಿಂದುಗಳಿದ್ದವು.ಉದಾಹರಣೆಗೆ : 2 ಬಕೆಟ್ ಗಳಿಟ್ಟು,ಮನೆಗೆಲಸದ ಬಗ್ಗೆ ಪಾಲಕರು ಸಂತೋಷವಾಗಿದ್ದರೆ, ಅದಕ್ಕಾಗಿ ಇಟ್ಟ ಒಂದು ಬಕೆಟ್ಟಿನಲ್ಲಿ ಮುಚ್ಚಳವನ್ನು ಹಾಕಬೇಕು; ಮನೆಗೆಲಸ ಹೆಚ್ಚೆಂದರೆ, ಒಂದು ಬಕೆಟ್ಟಿಗೂ, ಕಡಿಮೆ ಎನಿಸಿದರೆ, 2ನೇ ಬಕಟ್ಟಿಗೂ ಹಾಕಬೇಕು; ಹುಡುಗರು ಬಾಟ್ಲಿಯ ಮುಚ್ಚಳಗಳ ಸಂಖ್ಯೆಯನ್ನು ಆಗಲೆ ಲೆಕ್ಕ ಇಟ್ಟಿರುತ್ತಾರೆ. ಬಾಟಲಿಯ ನಾಮಫಲಕಗಳಿಗೆ ತಕ್ಕಂತೆ ವೋಟು ಮಾಡಲು ತಿಳಿಸಿದರು.



**ಚಿತ್ರ 4. ಮತದ ಡಬ್ಬಾಗಳು.**

**ಚಿಂತನೆಗೆ ವಿರಾಮ**

ಈ ಅಂಶಗಳನ್ನು ಅವಲೋಕಿಸಿದಾಗ ಕೆಲವೊಂದು ವಿಷಯಗಳ ಕುರಿತು ವಿಚಾರಿಸಬೇಕು ಅಥವಾ ಚಿಂತನೆ ಮಾಡಬೇಕು.

1. ಯಾರು ನಿಮ್ಮ ಜೊತೆಗಾರರಾಗಲು ಇಚ್ಛಿಸುತ್ತೀರಿ?
2. ಈ ವಿದ್ಯೆಯನ್ನು ನೀವು ಯಾವುದಕ್ಕೆ ಬಳಸುತ್ತೀರಿ?

- What strategies could you use to do this?
- Note down your answers in your Learning Diary.

## 7 ಸಾರಾಂಶ (ಉಪಸಂಹಾರ)

ಯಶಸ್ವಿ ಶಾಲೆಗಳಬಗ್ಗೆ ಮಾಡಿದ ಸಂಶೋಧನೆಗಳು, ಆ ಶಾಲಾ ನಾಯಕರು ತಮ್ಮ ಶಾಲೆಯ ಸಾಧನೆಯ ಕುರಿತು ಸ್ಪಷ್ಟವಾದ ಕಾಣ್ಕೆಯನ್ನು ಹೊಂದಿದ್ದನ್ನು, ಸಾದರಪಡಿಸುತ್ತವೆ. ಒಂದು ಕಾಣ್ಕೆಯ ಹೇಳಿಕೆಯು ಶಾಲೆಯು ಕ್ರಮಿಸಬೇಕಾದ ದಾರಿನಕ್ಷೆಯನ್ನೂ, ಮತ್ತು ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಹೊಂದಲು ಸಹಾಯಕವಾಗುವ ಒಂದು ಚೌಕಟ್ಟನ್ನೂ ನೀಡುತ್ತದೆ.. ಒಂದು ಪರಿಣಾಮಕಾರಿ ದೃಷ್ಟಿಕೋನವು ಶಾಲೆಯ ಎಲ್ಲ ಪಾಗೀದಾರ ವರ್ಗದವರನ್ನು– ಶಿಕ್ಷಕರು, ಪಾಲಕರು, ವಿದ್ಯಾರ್ಥಿಗಳು, ಶಾಲಾ ಸಂದರ್ಶಕರನ್ನು– ಒಳಗೊಂಡಿರುತ್ತದೆ ಹಾಗು ಎಲ್ಲರಿಗೂ–ಸಂದರ್ಶಕರಿಗೂ ಸಹ– ಸ್ಪಷ್ಟವಾಗಿ ಗೋಚರವಾಗುವ ರೀತಿಯಲ್ಲಿ ಇರುತ್ತದೆ, ಯಾಕೆಂದರೆ ಅದು ಶಾಲೆಯ ಎಲ್ಲದರಲ್ಲಿಯೂ ಮಿಳಿತವಾಗಿರುತ್ತದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದನ್ನು ತಿಳಿದುಕೊಳ್ಳುವುದಲ್ಲದೇ ಅದನ್ನು ಕಾರ್ಯರೂಪಕ್ಕೆ ತಂದು ಯಶಸ್ವಿಗೊಳಿಸಲು ಸೂಚಿಸುತ್ತವೆ.
ಶಾಲಾ ಕಾಣ್ಕೆಯ ಬೆಳವಣಿಗೆಯು ತುಂಬಾ ತ್ವರಿತಗತಿಯಾಗಿರಬಾರದು. ಎಲ್ಲರೂ ಪಾಲ್ಗೊಳ್ಳುವಂತೆ ಕಾರ್ಯಗಳನ್ನು ರೂಪಿಸಬೇಕು. ಶಾಲಾ ಪಾಗೀದಾರರಿಗೆ ಜವಬ್ದಾರಿ ವಹಿಸಬೇಕು; ಏಕೆಂದರೆ ಒಳಗಳಿಸುವಿಕೆ, ಎಲ್ಲರಲ್ಲಿಯೂ ಮಾಲಿಕತ್ವದ ಭಾವನೆ ಉಂಟುಮಾಡಿ, ಅವರೆಲ್ಲರೂ ಕಾಣ್ಕೆಯ ಸಾಕಾರಕ್ಕೆ ದುಡಿಯುವರು.ಅವರ ಸಹಕಾರ ಇಲ್ಲದೇ ಎಲ್ಲವೂ ವ್ಯರ್ಥವಾಗುವುದು. ಒಂದುವೇಳೆ ಅವರು ಒಗ್ಗೂಡಿ ಕೆಲಸ ನಿರ್ವಹಿಸಿ ಮೇಲ್ವಿಚಾರಣೆ ಮಾಡಿದರೆ ಶಾಲಾ ಬೆಳವಣಿಗೆ ಉತ್ತಮವಾಗುವುದು.
ಈ ಒಂದು ಭಾಗವು ನಾಯಕತ್ವದ ಘಟಕಗಳಲ್ಲಿ ಒಂದಾಗಿದೆ (ಹಾಗು ಶಾಲಾ ನಾಯಕತ್ವದ ರಾಷ್ಟ್ರೀಯ ಶಾಲೆಯ ನೀತಿಗಳಿಗೆ ಹೊಂದಿಸಲಾಗಿದೆ). ನಿಮ್ಮ ಜ್ಞಾನ ಮತ್ತು ಕೌಶಲ್ಯ ವೃದ್ಧಿಸಿಕೊಳ್ಳಲು ಇನ್ನೂ ಹಲವು ಘಟಕಗಳನ್ನು ಉಪಯೋಗಿಸಿಕೊಳ್ಳಬಹುದು.

- ಶಾಲಾ ಸ್ವ ಅವಲೋಕನದ ಮುಂಚೂಣಿಗಾರರಾಗಿ
- ಶಾಲಾ ಅಭಿವೃದ್ಧಿಯೋಜನೆ ಮುಂಚೂಣಿಗಾರರಾಗಿ
- ನಿಮ್ಮ ಶಾಲೆಯನ್ನು ಸುಧಾರಿಸಲು ವಿವಿಧತೆಯಲ್ಲಿನ ದತ್ತಾಂಶಗಳ ಬಳಕೆ
- ಶಾಲಾ ಬದಲಾವಣೆಗಾಗಿ ಯೋಜನೆ ಮತ್ತು ಮುಂದಾಳತ್ವ
- ನಿಮ್ಮ ಶಾಲೆಯಲ್ಲಿ ಬದಲಾವಣೆಯ ಅನುಷ್ಠಾನ.

## ಹೆಚ್ಚುವರಿ ಸಂಪನ್ಮೂಲಗಳು

- ಧ್ಯೇಯ ಮತ್ತು ಕಾಣ್ಕೆಯ ಹೇಳಿಕೆಗಳು http://www.mindtools.com/pages/article/newLDR_90.htm#sthash.ZZXtOrAn.dpuf
- ಒಂದು ಶಾಲೆಯ ಸುಧಾರಣೆ: http://tinyurl.com/pb3tpy8
- ಒಂದು ಕಾಣ್ಕೆಯ ಸೃಷ್ಟಿ: http://tinyurl.com/nl7g2wy
- 'ಕೌಶಿ ಸಿಲ್ವರ 'ಕ್ರಿಯೆಯಲ್ಲಿ ಮೌಲ್ಯಗಳು'': http://tinyurl.com/mx598wq
- ಬಾಹ್ಯ ಶಬ್ದ: http://www.soundout.org/publications.html

## ಆಕರಗಳು/ಗ್ರಂಥ ಸೂಚಿ


Barber, M., Whelan, F. and Clark, M. (2010) *Capturing the Leadership Premium: How the World's Top School Systems are Building Leadership Capacity for the Future*. London: McKinsey. Available from: http://mckinseyonsociety.com/downloads/reports/Education/schoolleadership_final.pdf (accessed 17 December 2014).

Barker, J. (1991) 'The power of vision: a 21st century look' (online), Joel A. Barker. Available from: http://www.joelbarker.com/speeches/the-power-of-vision/ (accessed 17 December 2014).

Batra, S. (2011) 'The construct and scope of educational leadership', *Learning Curve*, no. XVI (March), pp. 7–12. Available from: http://azimpremjifoundation.org/pdf/learning-curve-16.pdf (accessed 17 December 2014).

Brundrett, M. (ed.) (1999) *Principles of School Leadership*. Dereham: Peter Francis Publications.

Campbell, C., Gold, A. and Hunt, I. (2003) 'Articulating leadership values in action: conversations with school leaders', *International Journal of Leadership in Education*, vol. 6, no. 2.

Collins, J. (2001) *Good to Great*. London: Random House.

Diffen (undated) 'Mission statement vs. vision statement' (online). Available from: http://www.diffen.com/difference/Mission_Statement_vs_Vision_Statement (accessed 17 December 2014).

Fullan, M., (2002) 'Principals as leaders in a culture of change' (online), prepared for *Educational Leadership*, Special Issue, May; revised 12 March. Available from: http://www.michaelfullan.ca/media/13396053050.pdf (accessed 17 December 2014).

Fullan, M. (2003) 'Leadership and sustainability' (online), The Center for Development & Learning. Available from: http://www.cdl.org/articles/leadership-and-sustainability/ (accessed 17 December 2014).

Gold, A., Evans, J., Earley, P., Halpin, D. and Collarbone, P. (2003) 'Principled principals?', *Educational Management and Administration*, vol. 31, no. 2.

Hillman, J. and Stoll, L. (1994) 'Building vision', *Research Matters*, no. 2. London: Institute of Education.

Leithwood, K., Day, C., Sammons, P., Harris, A. and Hopkins, D. (2006) *Seven Strong Claims about Successful School Leadership*. Nottingham: National College for School Leadership. Available from: http://dera.ioe.ac.uk/6967/1/download%3Fid%3D17387%26filename%3Dseven-claims-about-successful-school-leadership.pdf (accessed 17 December 2014).

McKinsey & Co. (2010) 'How does a school system improve?' (online), December. Available from: http://www.mckinsey.com/insights/social_sector/how_does_a_school_system_improve (accessed 13 January 2015).

MindTools (undated) 'Mission and vision statements: unleashing the power of purpose' (online). Available from: http://www.mindtools.com/pages/article/newLDR_90.htm#sthash.ZZXtOrAn.dpuf (accessed 17 December 2014).

Rutherford, W. (1985) 'School principals as effective leaders', *Phi Delta Kappan*, vol. 67, no. 1, pp. 31–4.

Senge, P.M. (1992) *Schools that Learn – The Fifth Discipline: The Art and Practice*. London: Nicholas Brealey.

Silva, K. (2003) 'Values into action: how headteachers articulate and communicate their values and gain commitment for them from all stakeholders' (online), National College for School Leadership. Available from: http://tinyurl.com/mx598wq (accessed 17 December 2014).

West-Burnham J. (undated) 'Why vision?' (online), Microsoft Partners in Learning. Available from: http://www.is-toolkit.com/knowledge_library/kl_files/WhyVision_JohnWestBurnham.pdf (accessed 17 December 2014).

## ಂಛಿಞಟಿಂತಿಟಜಜಂಜಟಜಟಣ

Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India

project and not in any subsequent OER versions. This includes the use of the TESS-India, OU and UKAID logos.

Grateful acknowledgement is made to the following sources for permission to reproduce the material in this unit:

Table 2: adapted from http://www.diffen.com/difference/Mission_Statement_vs_Vision_Statement.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.